
20 ವರ್ಷ ವಯಸ್ಸಿನ ದುರಂದರ ನಾಯಕಿ ಸಾರಾ ಅರ್ಜುನ್ ಅವರು ಈಗ ಭಾರತೀಯ ಚಿತ್ರರಂಗದಲ್ಲಿ ಬಹುಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದಾರೆ. ಧನುಷ್ ನಟನೆಯ 56ನೇ ಸಿನಿಮಾಗೆ ಸಾರಾ ಅರ್ಜುನ್ ನಾಯಕಿ ಆಗುತ್ತಾರೆ ಎಂಬ ಸುದ್ದಿ ಕೇಳಿಬಂದಿದೆ. ಆದರೆ ಧನುಷ್ ಮತ್ತು ಸಾರಾ ಅರ್ಜುನ್ ನಡುವೆ ವಯಸ್ಸಿನ ಅಂತರ ಜಾಸ್ತಿ ಇದೆ.



BHARATHA SARATHI
KANNADA DAILY NEWS PAPER
CALL 9740160669
# ಭಾರತ ಸಾರಥಿ
RNI KARKAN2011/44806
ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ
prabhavaa.com



ಸಂಪಾದಕ
ಗಂಡಸಿ ಸದಾನಂದಸ್ವಾಮಿ





# ಆದಿಚುಂಚನಗಿರಿಯನ್ನು ಹಾಡಿ ಹೊಗಳಿದ ಮೋದಿ

ಬೆಂಗಳೂರು: ಪ್ರತಿ ಬಾರಿ ಕರ್ನಾಟಕಕ್ಕೆ ಬಂದಾಗಲೂ ಹೊಸ ಪ್ರೇರಣೆ ದೊರೆಯುತ್ತದೆ. ಕರ್ನಾಟಕ ತತ್ವಜ್ಞಾನ ಮತ್ತು ತಂತ್ರಜ್ಞಾನ ಎರಡರಲ್ಲಿಯೂ ಮುಂಚೂಣಿಯಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಐತಿಹಾಸಿಕ ಆದಿಚುಂಚನಗಿರಿ ಕ್ಷೇತ್ರಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ, ಶ್ರೀ ಭೈರವೇಶ್ವರ ಮಂದಿರದಲ್ಲಿ ಕಾಲ ಭೈರವೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ಭಕ್ತಿ ಸಮರ್ಪಿಸಿದರು. ನಾಥ ಪರಂಪರೆಯ, 1 ಸಾವಿರದ 800 ವರ್ಷಗಳ ಇತಿಹಾಸವುಳ್ಳ ಕ್ಷೇತ್ರದಲ್ಲಿ, ನೂತನವಾಗಿ ನಿರ್ಮಾಣಗೊಂಡಿರುವ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ "ಶ್ರೀ ಗುರು ಭೈರವೈಕ್ಯ ಮಂದಿರ"ದ ಲೋಕಾರ್ಪಣೆ ನೆರವೇರಿಸಿದರು,

> ಬಳಿಕ ಪ್ರಧಾನಿ ನರೇಂದ್ರ ಮೋದಿ ಮಾತನಾಡಿ, ಆದಿ ಚುಂಚನಗಿರಿಯಂಥ ಸಂಸ್ಥಾನವು, ನೈತಿಕ ಮೌಲ್ಯದ ಮೂಲಕ, ಇವುಗಳಿಗೆ ಹೊಸ ದಿಕ್ಕನ್ನು ತೋರಿಸುತ್ತಿದೆ. ಹಲವಾರು ದಶಕಗಳಿಂದ ನಿರಂತರ ಸೇವೆಯಲ್ಲಿ ತೊಡಗುವ ಮೂಲಕ, ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದರು. ಸಮಾಜದ ಯಾವೊಬ್ಬ ನಾಗರಿಕರು ಕಷ್ಟದಿಂದ ಬಳಲಬಾರದು ಎನ್ನುವ ಸದುದ್ದೇಶ ಹೊಂದಿರುವ, ಬಾಲಗಂಗಾಧರನಾಥ ಸ್ವಾಮೀಜಿಯವರ ಪರಂಪರೆಯನ್ನು, ಅವರ ಆಶೋತ್ತರಗಳನ್ನು, ಇಂದು ಆದಿ ಚುಂಚನಗಿರಿಯು ಮುಂದುವರೆಸಿಕೊಂಡು ಹೋಗುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಬಾಲಗಂಗಾಧರನಾಥ ಸ್ವಾಮೀಜಿ ಅವರು, ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಎಲ್ಲರ ಮನಸ್ಸಿನಲ್ಲಿ ಇದ್ದಾರೆ. ಅವರ ಈ ಆದರ್ಶವನ್ನು ಈಗ ಮುನ್ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನಾರ್ಹವಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಧಾನಿ ಅವರಿಗೆ, ಆದಿಚುಂಚನಗಿರಿ ನವಿಲು ಅಭಯಾರಣ್ಯವು, ಭಾರತದ ರಾಷ್ಟ್ರೀಯ ಪಕ್ಷಿ ನವಿಲುಗಳ ಸಂರಕ್ಷಣೆಗೆ ಮೀಸಲಾದ ಪ್ರಮುಖ ತಾಣವಾಗಿರುವ ಹಿನ್ನೆಲೆಯಲ್ಲಿ, ಅದರ ಸಂಕೇತವಾಗಿ ನವಿಲಿನ ಪ್ರತಿಕೃತಿ ನೀಡಿ ಗೌರವಿಸಲಾಯಿತು. ಅಲ್ಲದೇ ಸೌಂದರ್ಯ ಲಹರಿ ಮತ್ತು ಶಿವ ಮಹಿಮ್ನಃ ಸ್ತೋತ್ರಂ ಪುಸ್ತಕ, ಬಿಡುಗಡೆ ಮಾಡಲಾಯಿತು.

ಬಳಿಕ ಪ್ರಧಾನಿ ನರೇಂದ್ರ ಮೋದಿ ಮಾತನಾಡಿ, ಆದಿ ಚುಂಚನಗಿರಿಯಂಥ ಸಂಸ್ಥಾನವು, ನೈತಿಕ ಮೌಲ್ಯದ ಮೂಲಕ, ಇವುಗಳಿಗೆ ಹೊಸ ದಿಕ್ಕನ್ನು ತೋರಿಸುತ್ತಿದೆ. ಹಲವಾರು ದಶಕಗಳಿಂದ ನಿರಂತರ ಸೇವೆಯಲ್ಲಿ ತೊಡಗುವ ಮೂಲಕ, ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದರು.

ಸಮಾಜದ ಯಾವೊಬ್ಬ ನಾಗರಿಕರು ಕಷ್ಟದಿಂದ ಬಳಲಬಾರದು ಎನ್ನುವ ಸದುದ್ದೇಶ ಹೊಂದಿರುವ, ಬಾಲಗಂಗಾಧರನಾಥ ಸ್ವಾಮೀಜಿಯವರ ಪರಂಪರೆಯನ್ನು, ಅವರ ಆಶೋತ್ತರಗಳನ್ನು, ಇಂದು ಆದಿ ಚುಂಚನಗಿರಿಯು ಮುಂದುವರೆಸಿಕೊಂಡು ಹೋಗುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಬಾಲಗಂಗಾಧರನಾಥ ಸ್ವಾಮೀಜಿ ಅವರು, ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಎಲ್ಲರ ಮನಸ್ಸಿನಲ್ಲಿ ಇದ್ದಾರೆ. ಅವರ ಈ ಆದರ್ಶವನ್ನು ಈಗ ಮುನ್ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನಾರ್ಹವಾಗಿದೆ ಎಂದರು.

ಆದಿ ಚುಂಚನಗಿರಿಯು, ಕೇವಲ ಆಧ್ಯಾತ್ಮಿಕ ಮಾರ್ಗದರ್ಶನದ ಕೇಂದ್ರವಲ್ಲ, ಬದಲಿಗೆ ಜನರ ಪ್ರತಿಯೊಂದು ಆಶಯಗಳನ್ನು ಪೂರೈಸಲು, ಅವರ ಸಂಘರ್ಷಗಳಿಗೆ ದಾರಿಯಾಗಲು, ಸಮಾಜಕ್ಕೆ ಹೊಸ ದಿಕ್ಕನ್ನು ತೋರಿಸುವ ದಾರಿದೀವಿಗೆಯಾಗಿದೆ ಎಂದರು. ಬಾಲಗಂಗಾಧರನಾಥ ಸ್ವಾಮೀಜಿ ಅವರ ಆದರ್ಶಗಳನ್ನು ಕೇಂದ್ರ ಸರ್ಕಾರ ಪಾಲಿಸುತ್ತಿದೆ. ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಆಯುಷ್ಮಾನ್ ಭಾರತ್ ಯೋಜನೆಯನ್ನು ರೂಪಿಸಲಾಗಿದೆ. ಕಡುಬಡವರಿಗೆ ಉಪಯೋಗ ಆಗುವ ನಿಟ್ಟಿನಲ್ಲಿ ಈ ಯೋಜನೆ ಆರಂಭಿಸಲಾ1 ಗಿವೆ.

## ಹಾರ್ಮುಜ್ ಜಲಸಂಧಿಯನ್ನು "ಶಾಶ್ವತವಾಗಿ ತೆರೆಯುತ್ತಿದ್ದೇನೆ": ಟ್ರಂಪ್

ವಾಷಿಂಗ್ಟನ್: ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಆರಂಭಿಸಿದ ಸ್ವಲ್ಪ ಸಮಯದ ನಂತರ ಮುಚ್ಚಲ್ಪಟ್ಟಿರುವ ಹಾರ್ಮುಜ್ ಜಲಸಂಧಿಯನ್ನು "ಚೀನಾ ಮತ್ತು ಇಡೀ ಜಗತ್ತಿಗೆ" ಹಾರ್ಮುಜ್ ಜಲಸಂಧಿಯನ್ನು "ಶಾಶ್ವತವಾಗಿ ತೆರೆಯುತ್ತಿದ್ದೇನೆ" ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ.

"ನಾನು ಹಾರ್ಮುಜ್ ಜಲಸಂಧಿಯನ್ನು ಶಾಶ್ವತವಾಗಿ ತೆರೆಯುತ್ತಿರುವುದಕ್ಕೆ ಚೀನಾ ತುಂಬಾ ಸಂತೋಷವಾಗಿದೆ. ನಾನು ಅವರಿಗಾಗಿ ಮತ್ತು ಇಡೀ ಜಗತ್ತಿಗಾಗಿ ನಾನು ಈ ಕೆಲಸ ಮಾಡುತ್ತಿದ್ದೇನೆ. ಇಂತಹ ಪರಿಸ್ಥಿತಿ ಮತ್ತೆಂದೂ ಮರುಕಳಿಸುವುದಿಲ್ಲ" ಎಂದು ಟ್ರಂಪ್ ತಮ್ಮ ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸುವುದಿಲ್ಲ ಎಂದು ವೈಯಕ್ತಿಕವಾಗಿ ಭರವಸೆ ನೀಡಿದ್ದಾರೆ ಎಂದು ಟ್ರಂಪ್ ಪುನರುಚ್ಚರಿಸಿದ್ದಾರೆ.

"ಅವರು ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸದಿರಲು ಒಪ್ಪಿಕೊಂಡಿದ್ದಾರೆ. ನಾನು ಕೆಲವು ವಾರಗಳಲ್ಲಿ ಅಲ್ಲಿಗೆ ಭೇಟಿ ನೀಡಿದಾಗ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರು ನನಗೆ ದೊಡ್ಡ ಅಪ್ಪುಗೆ ನೀಡುತ್ತಾರೆ" ಎಂದು ಟ್ರಂಪ್ ಅವರು, ಬೀಜಿಂಗ್‌ನಲ್ಲಿ ಮೇ 14–15 ರಂದು ಕ್ಸಿ ಜೊತೆಗಿನ ತಮ್ಮ ಯೋಜಿತ ಶೃಂಗಸಭೆಯನ್ನು ಉಲ್ಲೇಖಿಸಿ ಹೇಳಿದ್ದಾರೆ.

ಇಂದು ಪ್ರಸಾರವಾದ ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, ಚೀನಾದ ಅಧ್ಯಕ್ಷರು ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ಕಳುಹಿಸುವುದಿಲ್ಲ ಎಂದು ಭರವಸೆ ನೀಡಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ.

"ಚೀನಾ ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ನೀಡುತ್ತಿದೆ ಎಂಬ ವರದಿಗೆ ಪ್ರತಿಕ್ರಿಯಿಸಿದ ಟ್ರಂಪ್, ನಾನು ಅವರಿಗೆ ಹಾಗೆ ಮಾಡದಂತೆ ಕೇಳಿಕೊಂಡು ಪತ್ರ ಬರೆದೆ ಮತ್ತು ಅವರು ಮೂಲಭೂತವಾಗಿ ಹಾಗೆ ಮಾಡುತ್ತಿಲ್ಲ ಎಂದು ಹೇಳುವ ಪತ್ರವನ್ನು ನನಗೆ ಬರೆದರು" ಎಂದು ತಿಳಿಸಿದ್ದಾರೆ. ಇದೇ ವೇಳೆ ಇರಾನ್ ವಿರುದ್ಧದ ಯುದ್ಧವು ಶೀಘ್ರದಲ್ಲೇ ಕೊನೆಗೊಳ್ಳಬಹುದು ಎಂದು ಟ್ರಂಪ್ ಹೇಳಿದ್ದಾರೆ. ಟ್ರಂಪ್ ಅವರ ಈ ಹೇಳಿಕೆ ಏಳನೇ ವಾರಕ್ಕೆ ಕಾಲಿಟ್ಟಿರುವ ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ನಡುವೆ ಎರಡನೇ ಸುತ್ತಿನ ಕದನ ವಿರಾಮ ಮಾತುಕತೆ ನಡೆಯುವ ಸುಳಿವು ನೀಡಿದೆ.

## ವಿನಯ್ ಕುಲಕರ್ಣಿ ದೋಷಿ

ಬೆಂಗಳೂರು: ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ಧಾರವಾಡ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ದೋಷಿ ಎಂದು ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್‌ಗೌಡ ಕೊಲೆ ಪ್ರಕರಣ ವಿಚಾರಣೆ ನಡೆಸಿದ್ದ ಬೆಂಗಳೂರು ಜನಪ್ರತಿನಿಧಿಗಳ ನ್ಯಾಯಾಲಯ ಮಹತ್ವದ ತೀರ್ಪು ಪ್ರಕಟಿಸಿತು. ಶಿಕ್ಷೆಯ ಪ್ರಮಾಣವನ್ನು ಕೋರ್ಟ್ ಪ್ರಕಟಿಸಲಿದೆ.

21 ಆರೋಪಿಗಳ ಪೈಕಿ 17 ಮಂದಿ ದೋಷಿಗಳಾಗಿದ್ದಾರೆ. 20ನೇ ಆರೋಪಿ ವಾಸುದೇವ ನಿಲಕೇಣಿ, 21ನೇ ಆರೋಪಿ ಸೋಮಶೇಕರ್ ನ್ಯಾಮಗೌಡ ಅವರನ್ನು ಕೋರ್ಟ್ ಈ ಪ್ರಕರಣದಿಂದ ಖುಲಾಸೆಗೊಳಿಸಿದೆ. ಎಲ್ಲಾ ದೋಷಿಗಳನ್ನು ಕಸ್ಟಡಿಗೆ ಪಡೆಯುವಂತೆ ಕೋರ್ಟ್ ಸಿಬಿಐಗೆ ಸೂಚಿಸಿದೆ. ಎ–1 ಬಸವರಾಜ್ ಮುತ್ತಗಿ ಮತ್ತು ಎ17 ಶಿವಾನಂದ ಬಿರಾದರ್ ಸರ್ಕಾರಿ ಸಾಕ್ಷಿಗಳಾಗಿರುವ ಕಾರಣ ಅವರನ್ನು ಕೋರ್ಟ್ ನಿರ್ದೋಷಿ ಎಂದು ಹೇಳಿದೆ.

ಸಿಆರ್‌ಪಿಸಿ ಸೆಕ್ಷನ್ 302 (ಕೊಲೆ), 120ಃ (ಕ್ರಿಮಿನಲ್ ಪಿತೂರಿ), ಸೆಕ್ಷನ್ 201 (ಸಾಕ್ಷ್ಯ ನಾಶ), ಸೆಕ್ಷನ್ 148 (ಮಾರಕಾಸ್ತ್ರಗಳೊಂದಿಗೆ ಗಲಭೆ), ಸೆಕ್ಷನ್ 149 (ಸಾಮಾನ್ಯ ಉದ್ದೇಶ) ಅಡಿ ಆರೋಪಗಳು ಸಾಬೀತಾಗಿದೆ ಎಂದು ಕೋರ್ಟ್ ತನ್ನ ತೀರ್ಪಿನಲ್ಲಿ ತಿಳಿಸಿದೆ.

ಎ2 – ವಿಕ್ರಂ, ಎ3 – ಕೀರ್ತಿಕುಮಾರ್, ಎ4 – ಸಂದೀಪ್, ಎ5 – ವಿನಾಯಕ, ಎ6 – ಮಹಾಬಲೇಶ್ವರ, ಎ7– ಸಂತೋಷ, ಎ8 – ದಿನೇಶ್, ಎ9 – ಅಶ್ವಥ್, ಎ10 – ಸುನೀಲ್, ಎ11– ನಜೀರ್ ಅಹ್ಮದ್, ಎ12 –ಶಾನವಾಝ್, ಎ13 – ನೂತನ್, ಎ14 – ಹರ್ಶಿತ್, ಎ15 – ವಿನಯ ಕುಲಕರ್ಣಿ, ಎ16 – ಚಂದ್ರಶೇಖರ್ ಇಂಡಿ, , ಎ18 – ವಿಕಾಸ್ ಕಲಬುರಗಿ, ಎ19 – ಚನ್ನಕೇಶವ ಟಿಂಗರಿಕರ್.

## ಮಹಿಳಾ ಮೀಸಲಾತಿ ಸಂಭ್ರಮದ ಕ್ಷಣ: ಮಾಳವಿಕಾ

ಮೈಸೂರು: ಮಹಿಳಾ ಮೀಸಲಾತಿಯು ಕರ್ನಾಟಕ, ಭಾರತ ಮಾತ್ರವಲ್ಲ ವಿಶ್ವದ ಎಲ್ಲ ಮಹಿಳೆಯರಿಗೂ ಸಂಭ್ರಮದ ಕ್ಷಣ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಮಾಳವಿಕಾ ಅವಿನಾಶ್ ಅವರು ತಿಳಿಸಿದ್ದಾರೆ. ಪ್ರಧಾನಿಯವರಿಂದ ಇದೊಂದು ಪ್ರಮುಖ ನಿರ್ಣಯ ಎಂದು ವಿಶ್ಲೇಷಿಸಿದ್ದಾರೆ.

ಮೈಸೂರಿನ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಇಂದು ಅವರು ಮಾಧ್ಯಮವನ್ನು ಉದ್ದೇಶಿಸಿ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿಜೀ ಯವರ ಕನಸಿನ ಭಾರತ, 2047ರ ವಿಕಸಿತ ಭಾರತಕ್ಕೆ ಮಹಿಳಾ ನೇತೃತ್ವದ ಅಭಿವೃದ್ಧಿಯ ಚಿಂತನೆ ಇದರ ಹಿಂದಿದೆ ಎಂದು ವಿವರ ನೀಡಿದರು. ಇದು ಮಹಿಳಾ ನಾಯಕತ್ವದ ಪರಿಕಲ್ಪನೆ ಎಂದರು. ರಾಜಕೀಯ ಪಕ್ಷಗಳು ಇದರಲ್ಲಿ ರಾಜಕಾರಣ ಮಾಡುವುದಿಲ್ಲ ಎಂಬ ಅಪೇಕ್ಷೆ ಮತ್ತು ನಮ್ಮ ನಿರೀಕ್ಷೆ ಎಂದು ಹೇಳಿದರು.

ರಾಜಕೀಯವಾಗಿ ಮಹಿಳಾ ಸಬಲೀಕರಣ ಮಾಡುವ ಶೇ 33 ಮೀಸಲಾತಿಯನ್ನು ನೀಡಲು ಸಂಸತ್ತಿನ ವಿಶೇಷ ಅಧಿವೇಶನವನ್ನು ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜೀ ಅವರು ಇದೇ 16ರಿಂದ ಕರೆದಿದ್ದಾರೆ. ಸಂಸತ್ತಿನ ಅಧಿವೇಶನದಲ್ಲಿ 3 ದಿನಗಳ ಕಾಲ ನಾರಿಶಕ್ತಿ ವಂದನ್ ಕುರಿತು ಚರ್ಚೆ ನಡೆಯಲಿದೆ. ಇದು ಕಾನೂನಾಗಿ ಜಾರಿಗೊಳ್ಳಲಿದೆ. ಈಗಾಗಲೇ ಲೋಕಸಭೆಯಲ್ಲಿ 543 ಸೀಟುಗಳಿದ್ದು ಅದನ್ನು ಹೆಚ್ಚಿಸಿ 816 ಮಾಡಲಿದ್ದಾರೆ.



ಇದರಿಂದ ಪುರುಷರ ಇರುಸುಮುರುಸನ್ನು ತಪ್ಪಿಸಲು ಸಾಧ್ಯವಿದೆ. ಜನಸಂಖ್ಯೆ ಹೆಚ್ಚಳದಿಂದ ಸೀಟುಗಳನ್ನು ಹೆಚ್ಚಿಸುವ ಅನಿವಾರ್ಯತೆಯೂ ಇದೆ ಎಂದು ಅಭಿಪ್ರಾಯಪಟ್ಟರು.

ಮಹಿಳಾ ಗೌರವಕ್ಕೆ ಸಂಬಂಧಿಸಿದ ಸ್ವಚ್ಛ ಭಾರತ್ ಮೂಲಕ ಶೌಚಾಲಯ ನಿರ್ಮಾಣ, ಶಿಕ್ಷಣಕ್ಕೆ ಸಂಬಂಧಿಸಿ ಬೇಟಿ ಬಚಾವೊ, ಬೇಟಿ ಪಡಾವೊ ಕಾರ್ಯಕ್ರಮವನ್ನು ಜಾರಿ ಮಾಡಿದ್ದಾರೆ. ಜನನದಲ್ಲೇ ಹೆಣ್ಣುಗುವಿನ ಕೊಲ್ಲುವಿಕೆಯನ್ನು ತಡೆಗಟ್ಟಲು ಕ್ರಮ ಕೈಗೊಂಡರು ಎಂದು ಮೆಚ್ಚುಗೆ ಸೂಚಿಸಿದರು. ಮಹಿಳೆಯರು ಮನೆ ಮಾತ್ರವಲ್ಲದೇ ಕೆಲಸ ಮಾಡುವ ಸ್ಥಳದಲ್ಲೂ ನಾಯಕತ್ವ ವಹಿಸಬಹುದು ಎಂಬ ನಿಟ್ಟಿನಲ್ಲಿ ಸ್ವಸಹಾಯ ಸಂಘಗಳ ಹೆಚ್ಚಳಕ್ಕೆ ಮೋದಿಜೀ ಅವರು ಕ್ರಮ ಕೈಗೊಂಡಿದ್ದಾರೆ ಎಂದು ತಿಳಿಸಿದರು.

ಭಾಗ್ಯಲಕ್ಷ್ಮಿ ಯೋಜನೆಯನ್ನು ಯಡಿಯೂರಪ್ಪ ಅವರ ಸರಕಾರ ಹೆಣ್ಣುಮಗುವಿನ ಭ್ರೂಣ ಹತ್ಯೆ ತಡೆಯುವ ದೃಷ್ಟಿಯಿಂದ ಆ ಕಾಲದಲ್ಲೇ ಜಾರಿಗೊಳಿಸಿತ್ತು. ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನೀಡಿದೆ ಎಂದು ವಿವರಿಸಿದರು. ಅದೆಲ್ಲದರ ಜೊತೆ ಸೈಕಲ್ ವಿತರಣೆ ಮಾಡಿದರು. ಇದು ಮಹಿಳಾ ಸಬಲೀಕರಣದ ದೃಢ ಹೆಜ್ಜೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಜೀ ಅವರು ಆರ್ಥಿಕ ಸಬಲೀಕರಣಕ್ಕಾಗಿ ವಿವಿಧ ಯೋಜನೆಗಳನ್ನು ನೀಡಿದ್ದಾರೆ. ಜನಧನ್, ಮುದ್ರಾ ಯೋಜನೆ ಸೇರಿ ಹಲವು ಯೋಜನೆಗಳನ್ನು ಅವರು ಜಾರಿಗೊಳಿಸಿದ್ದಾರೆ ಎಂದರು.

ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮನೆಗಳನ್ನು ಕೊಡಲಾಗುತ್ತದೆ. ಮೋದಿಜೀ ಅವರ ದೂರದೃಷ್ಟಿಯ ಪರಿಣಾಮವಾಗಿ ಮಹಿಳೆಯರ ಹೆಸರಿನಲ್ಲೇ ಮನೆಗಳನ್ನು ಕೊಡಲಾಗುತ್ತಿದೆ ಎಂದು ಗಮನಕ್ಕೆ ತಂದರು.

ರಾಜ್ಯ ಬಿಜೆಪಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮಿ ಅಶ್ವಿನ್ ಗೌಡ, ನಿಕಟಪೂರ್ವ ಜಿಲ್ಲಾಧ್ಯಕ್ಷೆ ಶ್ರೀಮತಿ ಮಂಗಳಾ ಸೋಮಶೇಖರ್, ನಿಕಟಪೂರ್ವ ರಾಜ್ಯ ಉಪಾಧ್ಯಕ್ಷೆ ಶ್ರೀಮತಿ ರೀನಾ ಪ್ರಕಾಶ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶ್ರೀಮತಿ ರೇಣುಕಾ ರಾಜು ಮತ್ತು ಮೈಸೂರು ಗ್ರಾಮಾಂತರ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಶ್ರೀಮತಿ ನಳಿನಾ ಇದ್ದರು.

## ಸಚಿವರ ಎದುರೇ ದಯಾಮರಣ ಬೇಡಿಕೆ

ತುಮಕೂರು: ವಸತಿಗಾಗಿ ಆಗ್ರಹಿಸಿ ಸಚಿವರ ಎದುರೇ ದಯಾಮರಣ ಬೇಡಿದ್ದ ಶಿರಾ ತಾಲೂಕಿನ ಮಹಿಳೆ ರಾಬಿಯಾ ಅವರ ಕಣ್ಣೀರಿಗೆ ಕೊನೆಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಸ್ಪಂದಿಸಿದ್ದಾರೆ. ಮಹಿಳೆಯ ಮುಂದಿನ ಆರು ತಿಂಗಳ ಬಾಡಿಗೆ ಮತ್ತು ರೇಷನ್ ವೆಚ್ಚವನ್ನು ಭರಿಸುವುದರ ಜೊತೆಗೆ ಮನೆ ಕೊಡಿಸುವ ಭರವಸೆಯನ್ನ ನೀಡಿದ್ದಾರೆ.

ಕಳೆದ ಏಪ್ರಿಲ್ 8ರಂದು ತುಮಕೂರು ನಗರದ ಗ್ರಂಥಾಲಯ ಸಂಕೀರ್ಣದಲ್ಲಿ ನಡೆದಿದ್ದ ಜನಸಂಪರ್ಕ ಸಭೆಯಲ್ಲಿ ರಾಬಿಯಾ ಎಂಬ ಮಹಿಳೆ ವೇದಿಕೆ ಮೇಲೆ ಬಂದು ಆಕ್ರೋಶ ವ್ಯಕ್ತಪಡಿಸಿದ್ದರು. "ಎರಡು ವರ್ಷಗಳ ಹಿಂದೆಯೇ ಭರವಸೆ ನೀಡಿದ್ದರೂ ನನಗೆ ಮನೆ ನೀಡಿಲ್ಲ, ನನಗೆ ಬದುಕಲು ದಾರಿ ಇಲ್ಲದಿದ್ದರೆ ದಯಾಮರಣ ನೀಡಿ" ಎಂದು ಸಚಿವರ ಎದುರೇ ಕಣ್ಣೀರು ಹಾಕಿದ್ದರು.

ತುಮಕೂರಿಗೆ ಆಗಮಿಸಿದ್ದ ಸಚಿವರನ್ನು ರಾಬಿಯಾ ಅವರು ಪ್ರವಾಸಿ ಮಂದಿರದಲ್ಲಿ ಭೇಟಿ ಮಾಡಿದ್ದರು. ಈ ವೇಳೆ ರಾಬಿಯಾಳ ಕಷ್ಟ ಆಲಿಸಿದ ಸಚಿವರು, ಆಕೆಯ ವಾಸದ ಮನೆಯ ಆರು ತಿಂಗಳ ಬಾಡಿಗೆ ಹಾಗೂ ಮನೆಗೆ ಬೇಕಾದ ರೇಷನ್ (ದಿನಸಿ) ವೆಚ್ಚವನ್ನು ತಾವೇ ಭರಿಸುವುದಾಗಿ ತಿಳಿಸಿದ್ದಾರೆ. ಮುಂದಿನ ಆರು ತಿಂಗಳ ಒಳಗಾಗಿ ಶಿರಾದಲ್ಲಿ ರಾಬಿಯಾಗೆ ಒಂದು ನಿವೇಶನ ಅಥವಾ ಮನೆ ಕೊಡಿಸುವ ಭರವಸೆಯನ್ನು ಸಚಿವರು ನೀಡಿದ್ದಾರೆ.

# 'ಡೀಲಿಮಿಟೇಷನ್ 2026' ಇಂದು ಮಂಡನೆ

ನವದೆಹಲಿ: ಕೇಂದ್ರ ಸರ್ಕಾರ ಈ ವಾರ ಸಂಸತ್ತಿನಲ್ಲಿ 'ಡೀಲಿಮಿಟೇಷನ್ 2026'ನ್ನು ಮಂಡಿಸಲು ಸಜ್ಜಾಗಿದೆ. ಈ ಮಸೂದೆ, ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಪ್ರದೇಶವು ಮತ್ತೆ ಭಾರತದ ನಿಯಂತ್ರಣಕ್ಕೆ ಬಂದರೆ, ಅಲ್ಲಿ ಕ್ಷೇತ್ರ ಮರುಹಂಚಿಕೆ ನಡೆಸಲು ಬೇಕಾದ ಕಾನೂನು ಚೌಕಟ್ಟನ್ನು ನಿರ್ದಿಷ್ಟಗೊಳಿಸುತ್ತದೆ.

ಈ ಕ್ರಮವನ್ನು, ಪಾಕ್ ಆಕ್ರಮಿತ ಪ್ರದೇಶದ ಮೇಲೆ ಭಾರತದ ದೀರ್ಘಕಾಲದ ಸಂವಿಧಾನಿಕ ಹಕ್ಕನ್ನು ಪುನರುಚ್ಚರಿಸುವ ಹೆಜ್ಜೆಯಾಗಿ ಪ್ರಸ್ತುತಪಡಿಸಲಾಗುತ್ತಿದೆ. ಪ್ರಸ್ತಾವಿತ ಕಾನೂನು ಪ್ರಕಾರ, ಪರಿಸ್ಥಿತಿ ಬದಲಾಗುವ ಸಂದರ್ಭದಲ್ಲಿ, ಪಾಕಿಸ್ತಾನ ಆಕ್ರಮಣದಲ್ಲಿರುವ ಆ ಭಾಗಗಳಲ್ಲಿ ಮರುಹಂಚಿಕೆ ಆಯೋಗದ ಅಧಿಕಾರವನ್ನು ಭಾರತ ಚುನಾವಣಾ ಆಯೋಗವೇ ವಹಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ.

ಪ್ರಸ್ತುತ, ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಆ ಪ್ರದೇಶಗಳಿಗೆ ಮೀಸಲಾಗಿರುವ 24 ಸ್ಥಾನಗಳು ಇವೆ; ಆದರೆ ಇವುಗಳಲ್ಲಿ ಇದುವರೆಗೆ ಯಾವುದೇ ಚುನಾವಣೆ ನಡೆದಿಲ್ಲ. ಈ ಮಸೂದೆಗೆ ಸಂಬಂಧಿಸಿದ ಚರ್ಚೆಯನ್ನು ಸಂಸತ್ತಿನ ವಿಸ್ತರಿತ ಮೂರು ದಿನಗಳ ಬಜೆಟ್ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳುವ ನಿರೀಕ್ಷೆಯಿದೆ.

### ಕ್ಷೇತ್ರ ಮರುಹಂಚಿಕೆ ತಿದ್ದುಪಡಿ ಮಸೂದೆ ವಿರೋಧಿಸುತ್ತೇವೆ: ಖರ್ಗೆ

ನವದೆಹಲಿ: ಪ್ರಸ್ತಾವಿತ ಕ್ಷೇತ್ರ ಮರುಹಂಚಿಕೆ (ಡೀಲಿಮಿಟೇಶನ್) ಸಂಬಂಧಿತ ಸಂವಿಧಾನ ತಿದ್ದುಪಡಿ ಮಸೂದಿಗೆ ವಿರೋಧವಾಗಿ ಮತ ಚಲಾಯಿಸಲು ಪ್ರತಿಪಕ್ಷಗಳು ತೀರ್ಮಾನಿಸಿವೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ತಿಳಿಸಿದ್ದಾರೆ.

ಸಂಸತ್ತಿನ ವಿಶೇಷ ಮೂರು ದಿನಗಳ ಅಧಿವೇಶನಕ್ಕೂ ಮುನ್ನ ಮಹಿಳಾ ಮೀಸಲು ಕಾನೂನು ಹಾಗೂ ಕ್ಷೇತ್ರ ಮರುಹಂಚಿಕೆ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ಚರ್ಚಿಸಲು, ಆಮ್ ಆದ್ಮಿ ಪಕ್ಷವನ್ನು ಹೊರತುಪಡಿಸಿ ಪ್ರಮುಖ ಪ್ರತಿಪಕ್ಷ ನಾಯಕರು ಬುಧವಾರ ನವದೆಹಲಿಯಲ್ಲಿರುವ ಖರ್ಗೆ ಅವರ ನಿವಾಸದಲ್ಲಿ ಸಭೆ ಸೇರಿದ್ದರು.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿಗೆ ಪ್ರತಿಪಕ್ಷಗಳು ಸದಾ ಬೆಂಬಲ ನೀಡಿದ್ದರೂ, ಈ ಮಸೂದೆಯನ್ನು ತರಲಾಗುತ್ತಿರುವ ವಿಧಾನವೇ ಆತಂಕದ ವಿಷಯ ಎಂದು ಖರ್ಗೆ ಒತ್ತಿ ಹೇಳಿದರು. "ನಾವು ಎಲ್ಲರೂ ಮಹಿಳಾ ಮೀಸಲು ಮಸೂದೆ ಪರವಾಗಿದ್ದೇವೆ, ಆದರೆ ಅದನ್ನು ತರಲಾಗುತ್ತಿರುವ ರೀತಿಯ ಬಗ್ಗೆ ಗಂಭೀರ ಆಕ್ಷೇಪವಿದೆ. ಇದು ರಾಜಕೀಯ ಉದ್ದೇಶಿತ ಕ್ರಮ. ಪ್ರತಿಪಕ್ಷಗಳ ಧ್ವನಿಯನ್ನು ಕುಂಠಿತಗೊಳಿಸಿ, ಅವರನ್ನು ದಮನ ಮಾಡಲು ಸರ್ಕಾರ ಈ ಹೆಜ್ಜೆ ಇಡುತ್ತಿದೆ," ಎಂದು ಸಭೆಯ ನಂತರ ಖರ್ಗೆ ಆರೋಪಿಸಿದರು. "ನಾವು ಮಹಿಳಾ ಮೀಸಲಾತಿಗೆ ನಿರಂತರವಾಗಿ ಬೆಂಬಲ ನೀಡುತ್ತಿದ್ದೇವೆ. ಹಿಂದೆ ಅಂಗೀಕರಿಸಲ್ಪಟ್ಟ ಸಂವಿಧಾನ ತಿದ್ದುಪಡಿ ಜಾರಿಗೆ ಬರಬೇಕು ಎಂದು ನಾವು ಒತ್ತಾಯಿಸುತ್ತಿದ್ದೇವೆ. ಡಿಲಿಮಿಟೇಶನ್ ವಿಷಯದಲ್ಲಿ ಅವರು (ಬಿಜೆಪಿ ನೇತೃತ್ವದ ಸರ್ಕಾರ) ಕುಯುಕ್ತಿ ಮಾಡುತ್ತಿದ್ದಾರೆ. ಆದ್ದರಿಂದ ಈ ಮಸೂದೆಯನ್ನು ವಿರೋಧಿಸಲು ಎಲ್ಲಾ ಪಕ್ಷಗಳು ಏಕಮತದಿಂದ ತೀರ್ಮಾನಿಸಿವೆ," ಎಂದು ಅವರು ಹೇಳಿದರು.

ಕಾಂಗ್ರೆಸ್, ಡಿಎಂಕೆ, ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ, ಆರ್‌ಜೇಡಿ, ಸಿಪಿಐ ಮತ್ತು ಸಿಪಿಐ(ಎಂ) ನಾಯಕರೂ ಈ ಸಭೆಯಲ್ಲಿ ಹಾಜರಿದ್ದರು.

ಸರ್ಕಾರದ ವಲಯಗಳು, ಮಸೂದೆ ಅಂಗೀಕಾರಕ್ಕೆ ಸರಳ ಬಹುಮತವೇ ಸಾಕು ಎಂದು ಹೇಳುತ್ತಿದ್ದು, ಆಡಳಿತಾರೂಢ ಮೈತ್ರಿ ಅದನ್ನು ಸುಲಭವಾಗಿ ಪಡೆಯುವ ವಿಶ್ವಾಸದಲ್ಲಿದೆ. ಆದರೆ, ಇದಕ್ಕೆ ಸಂಬಂಧಿಸಿದ ಇನ್ನೆರಡು ಕಾನೂನು ಪ್ರಸ್ತಾವನೆಗಳಾದ ಸಂವಿಧಾನ (131ನೇ ತಿದ್ದುಪಡಿ) ಮಸೂದೆ 2026 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳು (ತಿದ್ದುಪಡಿ) ಮಸೂದೆ 2026 ಗಳಿಗೆ ವಿಶೇಷ ಬಹುಮತದ ಅಗತ್ಯವಿರುತ್ತದೆ.

ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಮೇಲೆ ಭಾರತದ ಹಕ್ಕು 1947ರಲ್ಲಿ ಮಹಾರಾಜ ಹರಿಸಿಂಗ್ ಸಹಿ ಮಾಡಿದ ವಿಲೀನ ಪತ್ರದ ಮೇಲೆ ಆಧಾರಿತವಾಗಿದೆ. ಆ ವಿಲೀನ ಪತ್ರದ ಮೂಲಕ ಸಂಪೂರ್ಣ ಜಮ್ಮು ಮತ್ತು ಕಾಶ್ಮೀರ ಸಂಸ್ಥಾನ ಭಾರತದಲ್ಲಿ ವಿಲೀನಗೊಂಡಿತ್ತು. ಈ ನಿಲುವನ್ನು ಅನೇಕ ಕಾನೂನು ಮತ್ತು ರಾಜಕೀಯ ಕ್ರಮಗಳ ಮೂಲಕ ಪುನಃ ಪುನಃ ದೃಢಪಡಿಸಲಾಗಿದೆ. 1994ರಲ್ಲಿ ಸಂಸತ್ತಿನಲ್ಲಿ ಏಕಮತದಿಂದ ಅಂಗೀಕರಿಸಲಾದ ನಿರ್ಣಯವೂ ಇದರಲ್ಲಿ ಪ್ರಮುಖವಾಗಿದ್ದು, ಪಾಕಿಸ್ತಾನ ಆಕ್ರಮಿತ ಪ್ರದೇಶಗಳನ್ನು ಖಾಲಿ ಮಾಡಬೇಕೆಂದು ಅದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಆಡಳಿತಾತ್ಮಕ ನಿಯಂತ್ರಣ ಇಲ್ಲದಿದ್ದರೂ, ಭಾರತ ಪಾಕಿಸ್ತಾನ ಆಕ್ರಮಿತ ಕಾಶ್ಮೀರಕ್ಕೆ ಮೀಸಲಿಟ್ಟಿರುವ 24 ವಿಧಾನಸಭಾ ಸ್ಥಾನಗಳು, ಅನೇಕ ಮರುವಿಂಗಡಣೆ (ಡಿಲಿಮಿಟೇಶನ್) ಪ್ರಕ್ರಿಯೆಗಳ ನಂತರವೂ ಬದಲಾಗದೆ ಉಳಿದಿವೆ.

ಜಮ್ಮು ಮತ್ತು ಕಾಶ್ಮೀರದ ಒಟ್ಟು ಸ್ಥಾನಗಳ ಸಂಖ್ಯೆಯಲ್ಲಿ ಕಾಲಕ್ರಮೇಣ ತಿದ್ದುಪಡಿ ನಡೆದಿದ್ದರೂ, ಆ 24 ಸ್ಥಾನಗಳು ಖಾಲಿಯೇ ಇವೆ, ಏಕೆಂದರೆ ಆ ಪ್ರದೇಶದಲ್ಲಿ ಚುನಾವಣೆಗಳನ್ನು ನಡೆಸಲು ಸಾಧ್ಯವಿಲ್ಲ. ಕೇಂದ್ರ ಗೃಹ ಸಚಿವ ಅಮಿತ್ ಶಾ ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಹಲವು ಬಾರಿ ಪುನರುಚ್ಚರಿಸಿದ್ದಾರೆ ಮತ್ತು ಭಾರತ ಅದನ್ನು ಮರಳಿ ಪಡೆಯಲಿದೆ ಎಂದು ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಹ, ವಿಶೇಷವಾಗಿ 2019ರಲ್ಲಿ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಹುದ್ದೆಯನ್ನು ರದ್ದುಗೊಳಿಸಿದ ನಂತರ, ಜಮ್ಮು ಮತ್ತು ಕಾಶ್ಮೀರವನ್ನು ಸಂಪೂರ್ಣವಾಗಿ ಏಕೀಕರಿಸುವ ಸರ್ಕಾರದ ಬದ್ಧತೆಯನ್ನು ಒತ್ತಿ ಹೇಳಿದ್ದಾರೆ.

ಪಕ್ಷಭೇದವನ್ನು ಮೀರಿ ಬಂದಿರುವ ಅನೇಕ ಸರ್ಕಾರಗಳು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಬಗ್ಗೆ ಒಂದೇ ರೀತಿಯ ನಿಲುವನ್ನು ಕಾಯ್ದುಕೊಂಡಿವೆ. ತಂತ್ರಗಳು ಬದಲಾಗಿದ್ದರೂ, ಭಾರತದ ಅಧಿಕೃತ ನಿಲುವು ಬದಲಾಗಿಲ್ಲ; ಈ ವಿಷಯವನ್ನು ರಾಜತಾಂತ್ರಿಕ ವೇದಿಕೆಗಳಲ್ಲಿಯೂ, ಸಂಸತ್ತಿನ ಚರ್ಚೆಗಳಲ್ಲಿಯೂ ನಿರಂತರವಾಗಿ ಎತ್ತಲಾಗುತ್ತಿದೆ.

ಆದರೆ, ವಿರೋಧ ಪಕ್ಷಗಳು ಮಸೂದೆ ತರಲಾದ ಸಮಯದ ಬಗ್ಗೆ ಪ್ರಶ್ನೆ ಎತ್ತಿ, ಯಾವುದೇ ಮರುವಿಂಗಡಣೆ ಪ್ರಕ್ರಿಯೆ ಹೊಸ ಜನಗಣತಿಯ ನಂತರವೇ ನಡೆಯಬೇಕು ಎಂದು ವಾದಿಸುತ್ತಿವೆ ಮತ್ತು ಇದರ ರಾಜಕೀಯ ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡುತ್ತಿವೆ. ಸರ್ಕಾರದ ಅಭಿಪ್ರಾಯದಲ್ಲಿ, ಈ ಕಾನೂನು ಸಂವಿಧಾನಾತ್ಮಕ ಚೌಕಟ್ಟನ್ನು ಪೂರ್ಣಗೊಳಿಸಲು ಮತ್ತು ಭಾರತದ ಭೌಗೋಳಿಕ ಹಕ್ಕಿನ ನಿಲುವನ್ನು ಮತ್ತಷ್ಟು ಬಲಪಡಿಸಲು ಅಗತ್ಯವಾಗಿದೆ.

ಭಾರತ ಸಾರಥಿ 16/04/2026
BHARATHA SARATHI KANNADA DAILY NEWS PAPER
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

# ಪೀರಾಮಲ್ ಫೈನಾನ್ಸ್: ಹೊಸ ಮೈಲಿಗಲ್ಲು

ಬೆಂಗಳೂರು

ಪೀರಾಮಲ್ ಫೈನಾನ್ಸ್ ಲಿಮಿಟೆಡ್ ತನ್ನ ಬೆಳವಣಿಗೆಯ ಪಯಣದಲ್ಲಿ ಮಹತ್ವದ ಮೈಲಿಗಲ್ಲನ್ನು ಸಾಧಿಸಿ, ಮ್ಯಾನೇಜ್ಮೆಂಟ್ ಅಡಿಯಲ್ಲಿ ಒಟ್ಟು ಆಸ್ತಿಯಲ್ಲಿ ರೂ.1 ಲಕ್ಷ ಕೋಟಿ ಮೀರಿದುದಾಗಿ ಘೋಷಿಸಿದೆ. ಈ ಸಾಧನೆ ಕರ್ನಾಟಕ ಸೇರಿದಂತೆ ದೇಶದ ಪ್ರಾದೇಶಿಕ ಹಾಗೂ ಸೆಮಿ–ಅರ್ಬನ್ ಮಾರುಕಟ್ಟೆಗಳಲ್ಲಿ ಕಂಪನಿಯ ಬಲವಾದ ಬೆಳವಣಿಗೆಯನ್ನು ತೋರಿಸುತ್ತದೆ.



ಕರ್ನಾಟಕ ಪೀರಾಮಲ್ ಫೈನಾನ್ಸ್‌ಗೆ ಪ್ರಮುಖ ಮಾರುಕಟ್ಟೆಯಾಗಿದ್ದು, ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ ಮತ್ತು ಬೆಳಗಾವಿ ಸೇರಿದಂತೆ ಪ್ರಮುಖ ನಗರಗಳಲ್ಲಿ 93 ಶಾಖೆಗಳ ಮೂಲಕ ಬಲವಾದ ಸಾಲ ಪೋರ್ಟ್ಫೋಲಿಯೊವನ್ನು ನಿರ್ಮಿಸಿದೆ. ಹೋಮ್ ಲೋನ್ ಹಾಗೂ ಬಿಸಿನೆಸ್ ಲೋನ್‌ಗಳಿಗೆ ರಾಜ್ಯದಲ್ಲಿ ಹೆಚ್ಚಿನ ಬೇಡಿಕೆ ಇದ್ದು, ಇದು ವಿಶೇಷವಾಗಿ ಬೆಳೆಯುತ್ತಿರುವ ನಗರಗಳು ಮತ್ತು ಪಟ್ಟಣಗಳಿಂದ ಚಾಲಿತವಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಕಂಪನಿ ತನ್ನ ವಿತರಣಾ ಜಾಲವನ್ನು ಮಹತ್ತರವಾಗಿ ವಿಸ್ತರಿಸಿದ್ದು, 2021ರ ಹಣಕಾಸು ವರ್ಷದಲ್ಲಿ 20 ಶಾಖೆಗಳಿದ್ದವು, ಇದೀಗ 26 ರಾಜ್ಯಗಳ 460 ನಗರಗಳಲ್ಲಿ 650ಕ್ಕೂ ಹೆಚ್ಚು ಶಾಖೆಗಳವರೆಗೆ ವಿಸ್ತರಿಸಿದೆ. ಈ ವಿಸ್ತರಣೆಯಲ್ಲಿ ಕರ್ನಾಟಕದ ಶ್ರೇಣಿ–2 ಮತ್ತು ಶ್ರೇಣಿ–3 ಮಾರುಕಟ್ಟೆಗಳಲ್ಲಿ ಹೆಚ್ಚಿನ ಪ್ರವೇಶ ಪ್ರಮುಖ ಪಾತ್ರ ವಹಿಸಿದೆ.

# ಫ್ರೀಡಂ ಪಾರ್ಕ್ ಸಭಾಂಗಣಕ್ಕೆ ಎಚ್.ಎಸ್.ದೊರೆಸ್ವಾಮಿ ಹೆಸರಿಡುವಂತೆ ಆಗ್ರಹ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಿರ್ಮಾಣಗೊಂಡಿರುವ ಫ್ರೀಡಂ ಪಾರ್ಕ್ ಸಭಾಂಗಣಕ್ಕೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಅವರ ಹೆಸರನ್ನು ನಾಮಕರಣ ಮಾಡುವಂತೆ ಸ್ವಾತಂತ್ರ್ಯ ಉದ್ಯಾನ ಉಳಿಸಿ ಹೋರಾಟ ಸಮಿತಿ ಆಗ್ರಹಿಸಿದೆ.

ಈ ಕುರಿತು ಸಮಿತಿಯ ಅಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆದು ಮನವಿ ಸಲ್ಲಿಸಿದ್ದಾರೆ. ಅವರು ಹೇಳುವಂತೆ, ಎಚ್.ಎಸ್. ದೊರೆಸ್ವಾಮಿ ಅವರು ತಮ್ಮ ಜೀವನವನ್ನೇ ದೇಶದ ಸ್ವಾತಂತ್ರ್ಯಕ್ಕಾಗಿ ಸಮರ್ಪಿಸಿದ ಮಹಾನ್ ಚೇತನರಾಗಿದ್ದು, ಪತ್ರಕರ್ತ, ಸಾಹಿತಿ ಹಾಗೂ ಹೋರಾಟಗಾರರಾಗಿ ನಾಡು–ನುಡಿಗಾಗಿ ಅನನ್ಯ ಸೇವೆ ಸಲ್ಲಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ವೇಳೆ ಸೆರೆವಾಸ



ಅನುಭವಿಸಿದರೂ, ಜೈಲಿನಲ್ಲಿಯೇ ದೇಶಭಕ್ತಿ ಚಿಂತನೆಗಳನ್ನು ಮುಂದುವರಿಸಿ ಸಹ ಹೋರಾಟಗಾರರಿಗೆ ಪ್ರೇರಣೆ ನೀಡಿದವರಾಗಿದ್ದರು.

ಇದೇ ಸೆರೆಮನೆ ಆವರಣವೇ ಇಂದು ಫ್ರೀಡಂ ಪಾರ್ಕ್ ಆಗಿ ರೂಪಾಂತರಗೊಂಡಿದ್ದು, ಹೋರಾಟಗಾರರ ಕರ್ಮಭೂಮಿಯಾಗಿದೆ. ಈ ಉದ್ಯಾನವನ್ನು ಉಳಿಸುವ ಹೋರಾಟದಲ್ಲೂ ದೊರೆಸ್ವಾಮಿ ಅವರು ಪ್ರಮುಖ ಪಾತ್ರ ವಹಿಸಿದ್ದು, ಸಮಿತಿಯ ಗೌರವಾಧ್ಯಕ್ಷರಾಗಿ ಸಕ್ರಿಯವಾಗಿ ಭಾಗವಹಿಸಿದ್ದರು. ಯುವ ಪೀಳಿಗೆಗೆ ಮಾದರಿಯಾದ ಅವರ ಧೈರ್ಯ, ತ್ಯಾಗ ಮತ್ತು ದೇಶಭಕ್ತಿ ಸದಾ ಸ್ಮರಣೀಯವಾಗಿರಬೇಕು. ಈ ಹಿನ್ನೆಲೆ, ಫ್ರೀಡಂ ಪಾರ್ಕ್ ಸಭಾಂಗಣಕ್ಕೆ ಅವರ ಹೆಸರನ್ನು ನಾಮಕರಣ ಮಾಡುವುದರಿಂದ ಹೋರಾಟಗಾರರ ನೈತಿಕ ಸ್ಥೈರ್ಯ ಹೆಚ್ಚುವುದರ ಜೊತೆಗೆ ಸರ್ಕಾರವೂ ಹಿರಿಯ ಚೇತನರನ್ನು ಗೌರವಿಸಿದಂತಾಗುತ್ತದೆ ಎಂದು ಗಂಡಸಿ ಸದಾನಂದ ಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

# ಫೀನಿಕ್ಸ್ ಮಾರ್ಕೆಟ್‌ಸಿಟಿ ಬೆಂಗಳೂರಿನಲ್ಲಿ ಮಾಂತ್ರಿಕ ಜಗತ್ತು ಸೃಷ್ಟಿ

ಬೆಂಗಳೂರು: ಫೀನಿಕ್ಸ್ ಮಾರ್ಕೆಟ್‌ಸಿಟಿ ಬೆಂಗಳೂರು, ಈ ಬೇಸಿಗೆಯಲ್ಲಿ ತನ್ನ ಬಹುನಿರೀಕ್ಷಿತ ಹಾಲಿಡೇ ಲ್ಯಾಂಡ್ ಅನ್ನು ಮಾಂತ್ರಿಕ, ಸಂಗೀತ–ಪ್ರೇರಿತ ಅನುಭವ, ಕೆ–ಪಾಪ್ ಡ್ರೀಂಕ್ಯಾಚರ್‌ಗಳಾಗಿ ಮರುರೂಪಿಸಿದೆ. ರೋಮಾಂಚಕಾರಿಯಾದ, ಸಂವಾದಾತ್ಮಕ ಜಗತ್ತಾಗಿ ವಿನ್ಯಾಸಗೊಳಿಸಲಾಗಿರುವ ಈ ಅನುಭವವು ಸಂಗೀತ, ಚಲನೆ ಮತ್ತು ಕಲ್ಪನೆಯು ಒಟ್ಟಿಗೆ ಸೇರುವ ವಿನೋದದ, ಕನಸಿನಂತಹ ವಾತಾವರಣದತ್ತ ಪ್ರೇಕ್ಷಕರನ್ನು ಆಹ್ವಾನಿಸುತ್ತದೆ.




ಈ ಹಾಲಿಡೇಲ್ಯಾಂಡ್ 10 ಏಪ್ರಿಲ್ 2026 ರಿಂದ 31 ಏಪ್ರಿಲ್ 2026 ರವರೆಗೆ ನಡೆಯಲಿದ್ದು, ಫೀನಿಕ್ಸ್ ಮಾರ್ಕೆಟ್‌ಸಿಟಿಯ ತನ್ನದೇ ಆದ ಕೆ–ಪಾಪ್ ಡ್ರೀಂಕ್ಯಾಚರ್ಸ್, ಮಿಂಜಿ, ಯುನಾ ಮತ್ತು ಸಿಯೋಲ್ ತಂಡಗಳು ಸುಮಧುರ ಸಂಗೀತ, ವರ್ಣರಂಜಿತ ಮತ್ತು ಕಲಾತ್ಮಕತೆಯ ಸಂಗೀತ ರಸದೌತಣ ನೀಡಲಿವೆ.

ಕೆ–ಪಾಪ್ ಸಂಸ್ಕೃತಿಯ ಜಾಗತಿಕ ಶಕ್ತಿಯಿಂದ ಪ್ರೇರಿತವಾದ ಈ ಅನುಭವವು, ಸಂವಾದಾತ್ಮಕ, ಸಂಗೀತ ಆಧಾರಿತ ಗೇಮಿಂಗ್ ವಲಯಗಳಲ್ಲಿ ಮಕ್ಕಳು ತೊಡಗಿಸಿಕೊಳ್ಳುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ.

ಫೀನಿಕ್ಸ್ ಮಾರ್ಕೆಟ್‌ಸಿಟಿಯ ಮಾರುಕಟ್ಟೆ ಮುಖ್ಯಸ್ಥರಾದ ರಿತು ಮೆಹ್ತಾ ಅವರು ಮಾತನಾಡಿ, "ಹಾಲಿಡೇಲ್ಯಾಂಡ್ 2026ರೊಂದಿಗೆ ಮನರಂಜನೆಯನ್ನು ಮೀರಿದ ಅನುಭವವನ್ನು ಸೃಷ್ಟಿ ಮಾಡುವುದನ್ನು ನಾವು ಬಯಸಿದ್ದೇವೆ ಮತ್ತು ಮಕ್ಕಳಿಗಾಗಿ ಕಲ್ಪನೆ ಹಾಗೂ ಆಟದಲ್ಲಿ ತಲ್ಲೀನಗೊಳಿಸುವ ಜಗತ್ತನ್ನು ನೀಡುತ್ತೇವೆ. ಕೆ–ಪಾಪ್ ಡ್ರೀಂಕ್ಯಾಚರ್ಸ್ ಸಂಗೀತ, ಚಲನೆ ಮತ್ತು ಕಥೆ ಹೇಳುವಿಕೆಯನ್ನು ಒಟ್ಟುಗೂಡಿಸುತ್ತದೆ. ಈ ಮೂಲಕ ಮಕ್ಕಳು ತಮ್ಮನ್ನು ಆಟೋಟ ಕಲೆಗಳನ್ನು ಪ್ರದರ್ಶಿಸಲು ಸಹಕಾರಿಯಾಗುತ್ತದೆ.

ಇದರ ಜೊತೆಗೆ ಕುಟುಂಬಗಳಿಗೆ ಸಂತೋಷದಾಯಕ, ಹಂಚಿಕೊಂಡ ಕ್ಷಣಗಳನ್ನು ಸೃಷ್ಟಿ ಮಾಡುತ್ತದೆ. ಇದು ನಮ್ಮ ಪ್ರೇಕ್ಷಕರೊಂದಿಗೆ ಪ್ರತಿಧ್ವನಿಸುವ ಆಕರ್ಷಕ, ಹೆಚ್ಚಿನ ಶಕ್ತಿಯ ಅನುಭವಗಳನ್ನು ನಿರ್ವಹಿಸುವತ್ತ ನಮ್ಮ ನಿರಂತರ ಗಮನವನ್ನು ಪ್ರತಿಬಿಂಬಿಸುತ್ತದೆ" ಎಂದು ತಿಳಿಸಿದರು.

# 'ಸ್ಯಾಫೈರ್ ಈಕ್ವಿಟಿ ಲಾಂಗ್' ಶಾರ್ಟ್ ಎಸ್‌ಐಎಫ್' ಆರಂಭ

ಬೆಂಗಳೂರು

ಫ್ರಾಂಕ್ಲಿನ್ ಟೆಂಪಲ್ಟನ್ (ಭಾರತ) ಭಾರತದಲ್ಲಿ ತನ್ನ ಮೊದಲ ವಿಶೇಷ ಹೂಡಿಕೆ ನಿಧಿ (ಎಸ್‌ಐಎಫ್) ರೂಪದಲ್ಲಿ 'ಸ್ಯಾಫೈರ್ ಈಕ್ವಿಟಿ ಲಾಂಗ್ ಶಾರ್ಟ್ ಎಸ್‌ಐಎಫ್' ಅನ್ನು ಪ್ರಾರಂಭಿಸಿದೆ.

ಈ ನಿಧಿ ಮಾರುಕಟ್ಟೆ ಚಕ್ರಗಳಾದ್ಯಂತ ದೀರ್ಘಕಾಲೀನ ಆಲ್ಫಾ ಗಳಿಸುವ ಉದ್ದೇಶದಿಂದ ರೂಪಿಸಲ್ಪಟ್ಟಿದ್ದು, ಮಾಲೀಕತ್ವದ ಪರಿಮಾಣಾತ್ಮಕ ಲಾಂಗ್–ಶಾರ್ಟ್ ಈಕ್ವಿಟಿ ತಂತ್ರದ ಮೂಲಕ ದೊಡ್ಡ, ಮಧ್ಯಮ ಮತ್ತು ಸಣ್ಣ ಕ್ಯಾಪ್ ಕಂಪನಿಗಳಲ್ಲಿ ಹೂಡಿಕೆ ಮಾಡುತ್ತದೆ. ನಿಫ್ಟಿ 500 ವ್ಯಾಪ್ತಿಯ ಷೇರುಗಳಲ್ಲಿ ಹೂಡಿಕೆ ಮಾಡುವ ಮೂಲಕ ವೈವಿಧ್ಯಮಯ ಹೂಡಿಕೆ ಅವಕಾಶಗಳನ್ನು ಪಡೆಯಲು ಈ ನಿಧಿ ಸಹಾಯ ಮಾಡುತ್ತದೆ.

ಈ ತಂತ್ರವು ಶಿಸ್ತಿನ ಷೇರು ಆಯ್ಕೆ, ದೀರ್ಘ ಮತ್ತು ಸೀಮಿತ ಶಾರ್ಟ್ ಸ್ಥಾನಗಳ ನಡುವೆ ಕ್ರಿಯಾಶೀಲ ಹಂಚಿಕೆ ಹಾಗೂ ದೃಢ ಅಪಾಯ ನಿರ್ವಹಣೆಯ ಮೇಲೆ ಆಧಾರಿತವಾಗಿದೆ.

ಮಾರುಕಟ್ಟೆಯ ಚಂಚಲತೆಯನ್ನು ನಿಯಂತ್ರಿಸುವುದರ ಜೊತೆಗೆ ಅವಕಾಶಗಳನ್ನು ಬಳಸಿಕೊಳ್ಳಲು ಅಂಶ–ಆಧಾರಿತ ವಿಧಾನವನ್ನು ಅನುಸರಿಸುತ್ತದೆ.

'ಸ್ಯಾಫೈರ್ ಈಕ್ವಿಟಿ ಲಾಂಗ್–ಶಾರ್ಟ್ ಎಸ್‌ಐಎಫ್'ಗಾಗಿ ಹೊಸ ನಿಧಿ ಕೊಡುಗೆ (ಎನ್‌ಎಫ್‌ಒ) ಏಪ್ರಿಲ್ 10, 2026ರಿಂದ ಏಪ್ರಿಲ್ 24, 2026ರವರೆಗೆ ಚಂದಾದಾರಿಕೆಗೆ ತೆರೆದಿರುತ್ತದೆ.

# ಎಐ ಆಧಾರಿತ ಬೆಳವಣಿಗೆಗೆ ಉತ್ತೇಜನ

ಬೆಂಗಳೂರು

ಇನ್ಮೊಬಿ ತನ್ನ ಜಾಗತಿಕ ಜಾಹೀರಾತು ಇಕೋಸಿಸ್ಟಮ್‌ನಲ್ಲಿ ಎಐ ಆಧಾರಿತ ಬೆಳವಣಿಗೆಯನ್ನು ವೇಗಗೊಳಿಸುವ ನಿಟ್ಟಿನಲ್ಲಿ, ಸೇಲ್ಸ್‌ಫೋರ್ಸ್ ಜೊತೆಗಿನ ದೀರ್ಘಕಾಲದ ಸಹಯೋಗವನ್ನು ವಿಸ್ತರಿಸುತ್ತಿರುವುದಾಗಿ ಘೋಷಿಸಿದೆ.

ಕಳೆದ ಎರಡು ದಶಕಗಳಲ್ಲಿ ಎಐ ಮತ್ತು ಡೇಟಾವನ್ನು ತನ್ನ ಆವಿಷ್ಕಾರದ ಪ್ರಮುಖ ಅಸ್ತ್ರವಾಗಿ ಬಳಸಿಕೊಂಡು, ಇನ್ಮೊಬಿ ವಿಶ್ವದ ಅತಿದೊಡ್ಡ ಸ್ವತಂತ್ರ ಜಾಹೀರಾತು ವೇದಿಕೆಗಳಲ್ಲಿ ಒಂದಾಗಿ ಬೆಳೆದಿದೆ. ಇದೀಗ ಸೇಲ್ಸ್‌ಫೋರ್ಸ್ ಜೊತೆಗಿನ ಪಾಲುದಾರಿಕೆ, ಇನ್ಮೊಬಿಯ ಡಿಮ್ಯಾಂಡ್, ಸಪ್ಲೈ ಮತ್ತು ಎಕ್ಸ್ಚೇಂಜ್ ವ್ಯವಹಾರ ಘಟಕಗಳ ಬೆಳವಣಿಗೆಗೆ ಪೂರಕವಾಗುವ ಸೇಲ್ಸ್, ಸರ್ವೀಸ್ ಮತ್ತು ಡೇಟಾ ಮೂಲಸೌಕರ್ಯವನ್ನು ಬಲಪಡಿಸುವತ್ತ ಕೇಂದ್ರೀಕರಿಸಿದೆ.

ಈ ರೂಪಾಂತರದ ಭಾಗವಾಗಿ, ಇನ್ಮೊಬಿ ತನ್ನ ಜಾಗತಿಕ ವ್ಯವಹಾರದಲ್ಲಿ ಎಐ–ಫಸ್ಟ್ ಕಾರ್ಯಾಚರಣೆ ಮಾದರಿಯನ್ನು ಮತ್ತಷ್ಟು ಗಟ್ಟಿಗೊಳಿಸಲು ಸೇಲ್ಸ್‌ಫೋರ್ಸ್ ಪರಿಹಾರಗಳನ್ನು ಅಳವಡಿಸಿಕೊಂಡಿದೆ. ಪೈಪ್ಲೈನ್ ನಿರ್ವಹಣೆ ಮತ್ತು ಗ್ರಾಹಕರ ಸಂಪರ್ಕವನ್ನು ಸುಲಭಗೊಳಿಸುವ 'ಏಜೆಂಟ್‌ಫೋರ್ಸ್ ಸೇಲ್ಸ್' ಹಾಗೂ ಜಾಹೀರಾತುದಾರರು ಮತ್ತು ಪಾಲುದಾರರ ಸೇವಾ ಕಾರ್ಯಾಚರಣೆಗಳನ್ನು ಸುಧಾರಿಸುವ 'ಏಜೆಂಟ್‌ಫೋರ್ಸ್ ಸರ್ವೀಸ್' ಉಪಕರಣಗಳನ್ನು ಬಳಸಲಾಗುತ್ತಿದೆ.

ಇದರ ಜೊತೆಗೆ, ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಸೇಲ್ಸ್‌ಫೋರ್ಸ್ ರಿಯಲ್–ಟೈಮ್ ಪೂರ್ವಾನುಮಾನ, ಅವಕಾಶಗಳ ಒಳನೋಟಗಳು ಮತ್ತು ಎಕ್ಸಿಕ್ಯೂಟಿವ್ ಡ್ಯಾಶ್‌ಬೋರ್ಡ್‌ಗಳನ್ನು ಒದಗಿಸುತ್ತಿದೆ. ತಂಡಗಳ ನಡುವಿನ ಸುಗಮ ಸಹಯೋಗಕ್ಕಾಗಿ ಇನ್ಮೊಬಿ ಈಗ ಸ್ಲಾಕ್ ಎಂಟರ್ಪ್ರೈಸ್ ಗ್ರಿಡ್ ಗೆ ಅಪ್‌ಗ್ರೇಡ್ ಆಗಿದ್ದು, ಎಲ್ಲಾ ವ್ಯವಹಾರ ಘಟಕಗಳಲ್ಲಿ ಡೇಟಾವನ್ನು ಏಕೀಕರಿಸಲು 'ಡೇಟಾ 360' ವ್ಯವಸ್ಥೆಯನ್ನು ಬಳಸುತ್ತಿದೆ.

ಈ ಸಹಭಾಗಿತ್ವವು ಇನ್ಮೊಬಿಯ ಎಐ ಆಧಾರಿತ ಭವಿಷ್ಯದ ದೃಷ್ಟಿಕೋನವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ಜಾಗತಿಕ ಜಾಹೀರಾತು ಕ್ಷೇತ್ರದಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸಲು ನೆರವಾಗಲಿದೆ.

# ಮಕ್ಕಳಿಗಾಗಿ ಸೃಜನಶೀಲತೆ ಮತ್ತು ಮೋಜಿನ ರಸದೌತಣ

ಬೆಂಗಳೂರು

ಏಪ್ರಿಲ್ 18 ರಿಂದ ಮೇ 24, 2026ರವರೆಗೆ ಇಲ್ಲಿ 'ದ ಸಮ್ಮರ್ ಕಿಡ್ಸ್ ಫೆಸ್ಟಿವಲ್ 2026' ಆಯೋಜಿಸಲಾಗಿದೆ.

ಮಕ್ಕಳ ಉದ್ಯಮಶೀಲತೆ, ಕಲೆ ಮತ್ತು ಕಲಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಈ ಹಬ್ಬವನ್ನು ರೂಪಿಸಲಾಗಿದ್ದು, ಮಾಲ್‌ನಲ್ಲಿ ಡಿಸ್ಕವರಿ, ಕ್ರಿಯೇಟಿವ್ ಸ್ಕಿಲ್ಸ್ ಹಾಗೂ ಇಕೋ–ಲರ್ನಿಂಗ್ ವಲಯಗಳನ್ನೊಳಗೊಂಡ ವಿಶೇಷ 'ಮಲ್ಟಿ–ಜೋನ್ ಪೆವಿಲಿಯನ್' ಇರಲಿದೆ.1ನೇ ವಾರ (ಏಪ್ರಿಲ್ 18–19):ವಿವಿಧ ಚಟುವಟಿಕೆಗಳೊಂದಿಗೆ ಹಬ್ಬಕ್ಕೆ ಚಾಲನೆ. ಪುಟಾಣಿ ಬಾಣಸಿಗರಿಗಾಗಿ ಲಿಟಲ್ ಚೆಫ್ ಸ್ಪರ್ಧೆ ಮತ್ತು ಅದರ ಗ್ರ್ಯಾಂಡ್ ಫಿನಾಲೆ ನಡೆಯಲಿದೆ.

2ನೇ ವಾರ (ಏಪ್ರಿಲ್ 23–26):ಮಕ್ಕಳಲ್ಲಿ ಅನ್ವೇಷಣಾ ಮನೋಭಾವ ಬೆಳೆಸಲು ಬಿಕಮ್ ಆನ್ ಆಥರ್' ಸೆಷನ್ ಹಾಗೂ ರೋಮಾಂಚಕ ಪ್ಲಾನೆಟೇರಿಯಂ ಶೋ ಆಯೋಜಿಸಲಾಗಿದೆ.

3ನೇ ವಾರ (ಮೇ 7–10): ಸಕ್ರಿಯ ಕಲಿಕೆಯ ಜೊತೆಗೆ, ಕುಟುಂಬದೊಂದಿಗೆ ಆಚರಿಸಲು ವಿಶೇಷ ತಾಯಂದಿರ ದಿನಾಚರಣೆ ಕಾರ್ಯಕ್ರಮಗಳಿರಲಿವೆ. 4ನೇ ವಾರ (ಮೇ 21–24): ಅಂತಿಮ ಹಂತವಾಗಿ ಮಕ್ಕಳಲ್ಲಿ ಉದ್ಯಮಶೀಲತೆ ಬೆಳೆಸಲು 'ಕಿಡ್ಸ್ ಫ್ಲೀ ಮಾರ್ಕೆಟ್' ಮತ್ತು ತಜ್ಞರ ಉಪನ್ಯಾಸಗಳು ನಡೆಯಲಿವೆ.

# ವೃತ್ತಿ ಮಾರ್ಗದರ್ಶನಕ್ಕೆ ಹೊಸ ವೇದಿಕೆ

ಬೆಂಗಳೂರು

ಫಾರ್ಚೂನ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್ನ್ಯಾಷನಲ್ ಬ್ಯುಸಿನೆಸ್ (ಎಫ್‌ಐಐಬಿ) ನಿರ್ವಹಣಾ ಕ್ಷೇತ್ರದಲ್ಲಿ ವೃತ್ತಿ ಸಾಧನೆಗೆ ಆಸಕ್ತಿ ಹೊಂದಿರುವ ಆಕಾಂಕ್ಷಿಗಳಿಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ, ಏಪ್ರಿಲ್ 21, 2026ರಂದು ಬೆಂಗಳೂರು ನಗರದಲ್ಲಿ 'ಎಫ್‌ಐಐಬಿ ಮಿಕ್ಸರ್' ಅಧಿವೇಶನವನ್ನು ಆಯೋಜಿಸಲು ಮುಂದಾಗಿದೆ.

ಈ ಸಂವಾದಾತ್ಮಕ ಅಧಿವೇಶನವು ಪ್ರಸ್ತುತ



ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಂದಿಗೆ ನೇರ ಸಂಪರ್ಕ ಸಾಧಿಸಲು ಅವಕಾಶ ನೀಡುವ ಮೂಲಕ, ಎಫ್‌ಐಐಬಿಯ ಶೈಕ್ಷಣಿಕ ವ್ಯವಸ್ಥೆ, ಬೋಧನಾ ವಿಧಾನ, ಕ್ಯಾಂಪಸ್ ಜೀವನ ಮತ್ತು ವೃತ್ತಿ ಅವಕಾಶಗಳ ಕುರಿತು ಸ್ಪಷ್ಟ ತಿಳುವಳಿಕೆ ನೀಡಲು ರೂಪಿಸಲಾಗಿದೆ. ಅಧಿವೇಶನವು ಮಧ್ಯಾಹ್ನ 12:30ಕ್ಕೆ ಪ್ರಾರಂಭವಾಗಲಿದ್ದು, ಥರ್ಡ್ ವೇವ್ ಕಾಫಿ ನಲ್ಲಿ ನಡೆಯಲಿದೆ. ಈ ಕಾರ್ಯಕ್ರಮವು ಅನೌಪಚಾರಿಕವಾದರೂ ಅರ್ಥಪೂರ್ಣ ಸಂಭಾಷಣೆಗಳಿಗೆ ಸೂಕ್ತವಾದ ವಾತಾವರಣ ಒದಗಿಸುತ್ತದೆ.

# ಅನುರಾಧಾ ಪೌಡ್ವಾಲ್ ಜೊತೆ ಸಹಭಾಗಿತ್ವ

ಬೆಂಗಳೂರು

ಎಸ್‌ಒಟಿಸಿಟ್ರಾವೆಲ್ ತನ್ನ 'ದರ್ಶನ' ಆಧ್ಯಾತ್ಮಿಕ ಪ್ರವಾಸ ಪ್ಯಾಕೇಜ್‌ಗಳನ್ನು ಉತ್ತೇಜಿಸುವ ಉದ್ದೇಶದಿಂದ ಖ್ಯಾತ ಗಾಯಕಿ ಹಾಗೂ ಪದ್ಮಶ್ರೀ ಪುರಸ್ಕೃತ ಅನುರಾಧಾ ಪೌಡ್ವಾಲ್ ಅವರೊಂದಿಗೆ ವಿಶೇಷ ಸಹಭಾಗಿತ್ವವನ್ನು ಘೋಷಿಸಿದೆ.



ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಧ್ಯಾತ್ಮಿಕ ಪ್ರವಾಸೋದ್ಯಮದ ಮೇಲಿನ ಆಸಕ್ತಿ ಗಣನೀಯವಾಗಿ ಹೆಚ್ಚುತ್ತಿದೆ. ಭಕ್ತಿ, ಸಂಸ್ಕೃತಿ ಮತ್ತು ಅರ್ಥಪೂರ್ಣ ಅನುಭವಗಳನ್ನು ಒಟ್ಟುಗೂಡಿಸುವ ಯಾತ್ರೆಗಳತ್ತ ಜನರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಎಸ್‌ಒಟಿಸಿ ಈ ಸಹಭಾಗಿತ್ವದ ಮೂಲಕ ಭಕ್ತರೊಂದಿಗೆ ತನ್ನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಿ, ದೇಶ ಮತ್ತು ಉಪಖಂಡದ ವಿವಿಧ ಪವಿತ್ರ ಕ್ಷೇತ್ರಗಳಿಗೆ ಸುಸಂಘಟಿತ ತೀರ್ಥಯಾತ್ರೆಗಳನ್ನು ಉತ್ತೇಜಿಸಲು ಉದ್ದೇಶಿಸಿದೆ.

'ದರ್ಶನ' ಪ್ಯಾಕೇಜ್‌ಗಳನ್ನು ಭಕ್ತಿ ಮತ್ತು ಸೌಕರ್ಯ ಎರಡನ್ನೂ ಸಮತೋಲನಗೊಳಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಇವುಗಳಲ್ಲಿ ಸೂಕ್ತವಾಗಿ ಯೋಜಿಸಲಾದ ಪ್ರವಾಸ ಯೋಜನೆಗಳು, ಪೂಜೆ ಮತ್ತು ದರ್ಶನಕ್ಕೆ ಅನುಕೂಲಕರ ವ್ಯವಸ್ಥೆಗಳು, ಆರಾಮದಾಯಕ ವಸತಿ, ಸಸ್ಯಾಹಾರಿ ಆಹಾರ ಮತ್ತು ಅನುಭವ ಹೊಂದಿದ ಪ್ರವಾಸ ನಿರ್ವಾಹಕರ ಸಹಕಾರವನ್ನು ಒಳಗೊಂಡಿವೆ. ವಿಶೇಷವಾಗಿ ಹಿರಿಯ ನಾಗರಿಕರನ್ನು ಗಮನದಲ್ಲಿಟ್ಟುಕೊಂಡು ಈ ಯಾತ್ರೆಗಳನ್ನು ಸುಲಭ ಹಾಗೂ ಆರಾಮದಾಯಕವಾಗಿ ರೂಪಿಸಲಾಗಿದೆ.

ಎಸ್‌ಒಟಿಸಿ ಟ್ರಾವೆಲ್‌ನ ಅಧ್ಯಕ್ಷರು ಮತ್ತು ಕಂಟ್ರಿ ಹೆಡ್ (ಹಾಲಿಡೇಸ್ ಮತ್ತು ಕಾರ್ಪೊರೇಟ್ ಪ್ರವಾಸಗಳು) ಆಗಿರುವ ಎಸ್.ಡಿ. ನಂದಕುಮಾರ್ ಅವರು, "ಭಾರತದಲ್ಲಿ ಆಧ್ಯಾತ್ಮಿಕ ಪ್ರವಾಸೋದ್ಯಮ ವೇಗವಾಗಿ ಬೆಳೆಯುತ್ತಿದೆ. ಜನರು ತಮ್ಮ ನಂಬಿಕೆಗಳಿಗೆ ಆಧಾರವಾಗಿರುವ ಅರ್ಥಪೂರ್ಣ ಯಾತ್ರೆಗಳತ್ತ ಮುಖ ಮಾಡುತ್ತಿದ್ದಾರೆ. ನಮ್ಮ 'ದರ್ಶನ' ಪೋರ್ಟ್ಫೋಲಿಯೊ ಮೂಲಕ ಭಕ್ತಿ ಮತ್ತು ಸೌಕರ್ಯವನ್ನು ಒಟ್ಟುಗೂಡಿಸುವ ಸಮಗ್ರ ತೀರ್ಥಯಾತ್ರೆ ಅನುಭವಗಳನ್ನು ನೀಡುವುದು ನಮ್ಮ ಉದ್ದೇಶ" ಎಂದು ತಿಳಿಸಿದ್ದಾರೆ.

# ವಿದ್ಯಾರ್ಥಿ ಕೇಂದ್ರಿತ ಟರ್ಮ್ ಪ್ಲಾನ್ ಬಿಡುಗಡೆ ಮಾಡಿದ ಟಾಟಾ ಎಐಎ ಲೈಫ್ ಇನ್ಶೂರೆನ್ಸ್

ಬೆಂಗಳೂರು

ಭಾರತ ಮತ್ತು ಜಗತ್ತಿನಾದ್ಯಂತ ವಿದ್ಯಾರ್ಥಿಗಳು ತಮ್ಮ ಉನ್ನತ ಶಿಕ್ಷಣದ ಕನಸು ನನಸು ಮಾಡುವತ್ತ ಸಾಗುತ್ತಿದ್ದಾರೆ. ತಮ್ಮ ಶೈಕ್ಷಣಿಕ ಮಹತ್ವಾಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಹಣಕಾಸಿನ ನೆರವು ಪಡೆಯಲು ಹೆಚ್ಚಿನ ವಿದ್ಯಾರ್ಥಿಗಳು ಈಗ ಶಿಕ್ಷಣ ಸಾಲದ ಮೊರೆ ಹೋಗುತ್ತಿದ್ದಾರೆ.

ಈ ಸಾಲಗಳು ಉತ್ತಮ ವೃತ್ತಿಜೀವನದ ಅವಕಾಶಗಳಿಗೆ ಬಾಗಿಲು ತೆರೆಯುತ್ತವೆಯಾದರೂ, ಅದರೊಂದಿಗೆ ದೊಡ್ಡ ಮಟ್ಟದ ಹಣಕಾಸಿನ ಜವಾಬ್ದಾರಿಯನ್ನೂ ತರುತ್ತವೆ. ಸಾಮಾನ್ಯವಾಗಿ, ವಿದ್ಯಾರ್ಥಿಯು ಪದವಿ ಮುಗಿಸಿ ಉದ್ಯೋಗ ಪಡೆದ ನಂತರ ಶಿಕ್ಷಣ ಸಾಲದ ಮರುಪಾವತಿ ಆರಂಭವಾಗುತ್ತದೆ. ಆದರೆ, ಒಂದು ವೇಳೆ ಆ ಸಾಲವನ್ನು ತೀರಿಸಲು ವಿದ್ಯಾರ್ಥಿಯೇ ಇಲ್ಲದಂತಹ ಸಂದರ್ಭ ಎದುರಾದರೆ ಏನಾಗಬಹುದು? ಆಗ ಆ ಸಾಲದ ಹೊರೆಯು ಕುಟುಂಬದ ಮೇಲೆ ಬೀಳುತ್ತದೆ, ಇದು ಈಗಾಗಲೇ ಸಂಕಷ್ಟದಲ್ಲಿರುವ ಕುಟುಂಬಕ್ಕೆ ಮತ್ತಷ್ಟು ಆರ್ಥಿಕ ಸಂಕಷ್ಟವನ್ನು ತಂದೊಡ್ಡುತ್ತದೆ.

ಈ ಆತಂಕವನ್ನು ದೂರಮಾಡುವ ನಿಟ್ಟಿನಲ್ಲಿ, ದೇಶದ ಪ್ರತಿಷ್ಠಿತ ಟಾಟಾ ಎಐಎ ಲೈಫ್ ಇನ್ಶೂರೆನ್ಸ್ ಸಂಸ್ಥೆಯು ತನ್ನ ಪ್ರಮುಖ ಯೋಜನೆಯಾದ 'ಟಾಟಾ ಎಐಎ ಸಂಪೂರ್ಣ ರಕ್ಷಾ ಪ್ರಾಮಿಸ್' ಅಡಿಯಲ್ಲಿ ಹೆಚ್ಚುವರಿ ವೈಶಿಷ್ಟ್ಯವಾಗಿ 'ವಿದ್ಯಾರ್ಥಿ ಕೇಂದ್ರಿತ ಟರ್ಮ್ ಇನ್ಶೂರೆನ್ಸ್' ಅನ್ನು ಬಿಡುಗಡೆ ಮಾಡಿದೆ. ಒಂದು ವೇಳೆ ಅಕಾಲಿಕ ಮರಣದ ಕಾರಣದಿಂದ ವಿದ್ಯಾರ್ಥಿಯು ಸಾಲದ ಜವಾಬ್ದಾರಿಯನ್ನು ಪೂರೈಸಲು ಸಾಧ್ಯವಾಗದಿದ್ದರೆ,

ಈ ಹೊಸ ಟರ್ಮ್ ಇನ್ಶೂರೆನ್ಸ್ ಯೋಜನೆಯು ಶಿಕ್ಷಣ ಸಾಲದ ಮರುಪಾವತಿಯ ಹೊರೆಯಿಂದ ಕುಟುಂಬಕ್ಕೆ ಆರ್ಥಿಕ ರಕ್ಷಣೆ ಒದಗಿಸುವಂತೆ ನೋಡಿಕೊಳ್ಳುತ್ತದೆ. ಈ ಕುರಿತು ಹೆಚ್ಚಿನ ಮಾಹಿತಿ ಣಚಿಣಚಿಚುಚಿ.ಛಿಒಟ ನಲ್ಲಿ ಲಭ್ಯವಿದೆ.

# ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಫ್ಲ್ಯಾಗ್‌ಶಿಪ್ ಸ್ಟೋರ್ ಆರಂಭ

ಬೆಂಗಳೂರು




ಲಿಸಿಯಸ್ ತನ್ನ ಆಫ್‌ಲೈನ್ ಹಾದಿಯನ್ನು ಮತ್ತಷ್ಟು ವಿಸ್ತರಿಸಿ, ಎಚ್‌ಎಸ್‌ಆರ್ ಲೇಔಟ್ ನಲ್ಲಿ ತನ್ನ ಅತಿ ದೊಡ್ಡ ಫ್ಲ್ಯಾಗ್‌ಶಿಪ್ ರಿಟೇಲ್ ಅಂಗಡಿಯನ್ನು ಆರಂಭಿಸಿದೆ.

ಸುಮಾರು 2,000 ಚದರ ಅಡಿ ವಿಸ್ತೀರ್ಣ ಹೊಂದಿರುವ ಈ ಅಂಗಡಿಯಲ್ಲಿ 100ಕ್ಕೂ ಹೆಚ್ಚು ಉತ್ಪನ್ನಗಳು ಲಭ್ಯವಿದ್ದು, ಗ್ರಾಹಕರಿಗೆ ಪ್ರೀಮಿಯಂ ಖರೀದಿ ಅನುಭವವನ್ನು ಒದಗಿಸುವುದರ ಜೊತೆಗೆ, ಸುತ್ತಮುತ್ತಲಿನ ಪ್ರದೇಶಗಳಿಗೆ 15 ನಿಮಿಷಗಳಲ್ಲಿ ವೇಗದ ವಿತರಣಾ ಸೌಲಭ್ಯವನ್ನು ನೀಡುವ ಪೂರೈಕೆ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತದೆ.

ಎಚ್‌ಎಸ್‌ಆರ್ ಲೇಔಟ್‌ನ 24ನೇ ಮುಖ್ಯ ರಸ್ತೆಯ ಶ್ರೀ ಸಾಯಿ ಆರ್ಕೇಡ್‌ನಲ್ಲಿ ಇರುವ ಈ ಅಂಗಡಿ, ಲಿಸಿಯಸ್ ಸಂಸ್ಥೆಯ ಚಿಲ್ಲರೆ ವಿಸ್ತರಣೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ. ಮೂಲ ವಸ್ತು ಸಂಗ್ರಹಣೆ, ಉತ್ಪನ್ನ ನವೀನತೆ ಮತ್ತು ಗ್ರಾಹಕ ಅನುಭವವನ್ನು ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸುವ ಮೂಲಕ, ಗ್ರಾಹಕರಿಗೆ ಹೊಸ ರೀತಿಯ ಖರೀದಿ ಅನುಭವವನ್ನು ನೀಡುವ ಉದ್ದೇಶ ಹೊಂದಿದೆ.

ಈ ಅಂಗಡಿ ಆಫ್‌ಲೈನ್ ಖರೀದಿ ಅನುಭವವನ್ನು ಆನ್‌ಲೈನ್ ವೇಗದೊಂದಿಗೆ ಸಂಯೋಜಿಸಿ, ಎಚ್‌ಎಸ್‌ಆರ್ ಪ್ರದೇಶದ ಗ್ರಾಹಕರಿಗೆ ತ್ವರಿತ ಸೇವೆ ಒದಗಿಸುತ್ತದೆ.

# ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನ ಅಭಿಯಾನ ಸೇರ್ಪಡೆ ಮತ್ತು ಪ್ರಭಾವ

ಬೆಂಗಳೂರು

ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರು ಮೂಲಕ ಬೆಂಬಲಿತ ಅನೇಕ ಕಾರಣಗಳಲ್ಲಿ, ಸೊಸೈಟಿ ಆಫ್ ಸಿಸ್ಟರ್ಸ್ ಆಫ್ ಚಾರಿಟಿ ಆಫ್ ಸೇಂಟ್ ಆನ್ಸ್ ನ ಕೆಲಸವು ತೃತೀಯ ಲಿಂಗಿ ವ್ಯಕ್ತಿಗಳು ಹೆಚ್ಚು ಸ್ಥಿರ ಮತ್ತು ಗೌರವಯುತ ಜೀವನೋಪಾಯವನ್ನು ನಿರ್ಮಿಸಲು ಸಹಾಯ ಮಾಡುವತ್ತ ಗಮನ ಹರಿಸಿದೆ. ಈ ಕಾರ್ಯಕ್ರಮದ ಚಾರಿಟಿ ಪ್ಲಾಟ್ ಫಾರ್ಮ್ ಮೂಲಕ, ಓಟಗಾರರು ಚಾಲನೆ, ಟೈಲರಿಂಗ್, ಬ್ಯೂಟಿಷಿಯನ್ ಕೋರ್ಸ್ ಗಳು ಮತ್ತು ಸಣ್ಣ ವ್ಯವಹಾರಗಳಂತಹ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಫಲಾನುಭವಿಗಳನ್ನು ಬೆಂಬಲಿಸಲು ಸಂಸ್ಥೆಗೆ ಅನುವು ಮಾಡಿಕೊಡುವ ಹಣವನ್ನು ಸಂಗ್ರಹಿಸುತ್ತಾರೆ.

ಜೀವನೋಪಾಯದ ಬೆಂಬಲದ ಜತೆಗೆ, ಕಾರ್ಯಕ್ರಮಗಳು ಗುರುತಿನ ಚೀಟಿಗಳು ಮತ್ತು ಪರವಾನಗಿಗಳಂತಹ ಅಗತ್ಯ ದಾಖಲಾತಿಗಳಿಗೆ ಪ್ರವೇಶವನ್ನು ಸಕ್ರಿಯಗೊಳಿಸುವತ್ತ ಗಮನ ಹರಿಸುತ್ತವೆ. ಜತೆಗೆ ಫಲಾನುಭವಿಗಳನ್ನು ಸರ್ಕಾರಿ ಯೋಜನೆಗಳು ಮತ್ತು ಉದ್ಯೋಗಾವಕಾಶಗಳೊಂದಿಗೆ ಸಂಪರ್ಕಿಸುತ್ತವೆ. ಈ ಬೆಂಬಲದೊಂದಿಗೆ, ಹೆಚ್ಚುತ್ತಿರುವ ತೃತೀಯ ಲಿಂಗಿ ವ್ಯಕ್ತಿಗಳು ಬದುಕುಳಿಯುವ ಆಧಾರಿತ ಕೆಲಸದಿಂದ ದೂರ ಸರಿಯುತ್ತಿದ್ದಾರೆ ಮತ್ತು ಸ್ವತಂತ್ರವಾಗಿ ಗಳಿಸಲು ಪ್ರಾರಂಭಿಸುತ್ತಿದ್ದಾರೆ.

"ಟಿಸಿಎಸ್ ವರ್ಲ್ಡ್ 10 ಕೆ ಜತೆಗಿನ ಈ ಸಂಬಂಧವನ್ನು ವಿಶೇಷವಾಗಿ ಅರ್ಥಪೂರ್ಣವಾಗಿಸುವುದು ತೃತೀಯ ಲಿಂಗಿ ವ್ಯಕ್ತಿಗಳಿಗೆ ಅಂಚುಗಳನ್ನು ಮೀರಿ ನೋಡಲು ಮತ್ತು ಬೆಂಬಲಿಸಲು ಇದು ಸೃಷ್ಟಿಸುವ ಅವಕಾಶವಾಗಿದೆ. ಓಟಗಾರರು ಸಂಗ್ರಹಿಸಿದ ಹಣದ ಮೂಲಕ, ವ್ಯಕ್ತಿಗಳು ಬದುಕುಳಿಯುವ ಆಧಾರಿತ ಕೆಲಸದಿಂದ ಚಾಲನೆ ಮತ್ತು ಸಣ್ಣ ವ್ಯವಹಾರಗಳಂತಹ ಜೀವನೋಪಾಯಕ್ಕೆ ಹೋಗಲು ನಾವು ಸಹಾಯ ಮಾಡಲು ಸಾಧ್ಯವಾಗುತ್ತದೆ. ಇವು ಕೇವಲ ಉದ್ಯೋಗಾವಕಾಶಗಳಲ್ಲ, ಆದರೆ ಸಮಾಜದಲ್ಲಿ ಘನತೆ, ಗೋಚರತೆ ಮತ್ತು ಸ್ವೀಕಾರದತ್ತ ಹೆಜ್ಜೆಗಳಾಗಿವೆ" ಎಂದು ಸೇಂಟ್ ಆನ್ಸ್ ನ ಸೊಸೈಟಿ ಆಫ್ ಸಿಸ್ಟರ್ಸ್ ಆಫ್ ಚಾರಿಟಿಯ ಪ್ರಾಜೆಕ್ಟ್ ಮ್ಯಾನೇಜರ್ ರೀಟಾ ದೀಪಕ್ ಹೇಳಿದ್ದಾರೆ.

"ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ರೇಸ್ ಅನ್ನು ಮೀರಿದ ಬಲವಾದ ಉದ್ದೇಶದಿಂದ ನಡೆಸಲ್ಪಡುತ್ತದೆ. ಓಟಗಾರರು ದೊಡ್ಡ ಕಾರಣಕ್ಕೆ ಕೊಡುಗೆ ನೀಡುತ್ತಾರೆ ಮತ್ತು ನಮ್ಮ ನೀಡುವ ಮಾದರಿಯ ಮೂಲಕ, ನಿಜವಾದ ಬದಲಾವಣೆಯನ್ನು ಸೃಷ್ಟಿಸುವ ಉಪಕ್ರಮಗಳನ್ನು ಬೆಂಬಲಿಸಲು ನಮಗೆ ಸಾಧ್ಯವಾಗುತ್ತದೆ.

# 'ಜಾನಪದ ಲೋಕ ಕಲೆಯನ್ನು ರಕ್ಷಿಸುವ ಕೆಲಸ ಮಾಡುತ್ತಿದೆ'

ರಾಮನಗರ

ಜಾನಪದ ಉಳಿವು ಮಹಿಳೆಯರಿಂದ ಸಾಧ್ಯವಾಗಿದೆ. ಕಲಾವಿದರನ್ನು ಗುರುತಿಸಿ ಕಲೆಯನ್ನು ಸಂರಕ್ಷಿಸುವ ಕೆಲಸವನ್ನು ಕರ್ನಾಟಕ ಜಾನಪದ ಪರಿಷತ್ತು, ಜಾನಪದ ಲೋಕ ನಿರಂತರವಾಗಿ ಮಾಡುತ್ತಾ ಬಂದಿದೆ ಎಂದು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ತಿಳಿಸಿದರು.

ಅವರು ಏ.12ರ ಭಾನುವಾರ ರಾಮನಗರದ ಜಾನಪದ ಲೋಕದಲ್ಲಿ ಕರ್ನಾಟಕ ಜನಪದ ಪರಿಷತ್ತು ವತಿಯಿಂದ "ಲೋಕಸಿರಿ ತಿಂಗಳ ಅತಿಥಿ–115, ನಾಡೋಜ ಎಚ್. ಎಲ್ ನಾಗೇಗೌಡರ ನೆನಪಿನ ಪ್ರತಿ ತಿಂಗಳ ನಡೆಯುವ ತಿಂಗಳ ಅತಿಥಿ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.




ಸ್ಥಳೀಯರದಾದ ಗಿರಿಜಮ್ಮನವರನ್ನು ಗುರುತಿಸಲಾಗಿರಲಿಲ್ಲ ಮಹಿಳಾ ದಿನಾಚರಣೆಯ ಅಂಗವಾಗಿ ಪತ್ರಿಕೆಯಲ್ಲಿ ಗಿರಿಜಮ್ಮನವರ ಲೇಖನ ಓದಿದೆ ಇಂತಹ ಪ್ರಮುಖ ಕಲಾವಿದೆಯನ್ನು ತಿಂಗಳ ಅತಿಥಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ ಎಂದರು.

ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಮಾತನಾಡಿ, ನಾಡೋಜ ಎಚ್.ಎಲ್ ನಾಗೇಗೌಡರಿಗೆ ಸೋಬಾನೆ ಹಾಡುಗಾರರೆಂದರೆ ಅಪಾರ ಪ್ರೀತಿ ಅದರಿಂದಲೇ ಸೋಬಾನೆ ಚಿಕ್ಕಮ್ಮನವರ ರಾಗಿ ಬೀಸುವ ಕಲ್ಲು ಇಂದು ಪರಿಷತ್ತಿನ ಲೋಗೋ ಬಳಸಿದ್ದಾರೆ ಎಂದು ಹೇಳಿದರು.

ನಾಡೋಜ ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಪ್ರತಿ ತಿಂಗಳು ನಡೆಯುವ ಲೋಕಸಿರಿ ತಿಂಗಳ ಅತಿಥಿ 115 ಕಾರ್ಯಕ್ರಮದಲ್ಲಿ ಗೌರವ ಸ್ವೀಕರಿಸಿದ ಸೋಬಾನೆ ಕಲಾವಿದರಾದ ಗಿರಿಜಮ್ಮ ಸಂವಾದಲ್ಲಿ ತಂದೆ ಸಿದ್ದಯ್ಯ ಸಾರಂಗಧರನ ಪಾತ್ರ ನಿರ್ವಹಿಸುತ್ತಿದ್ದರು. ತಂದೆಯಂತೆ ಹಾಡುತ್ತಾ ಕಲಿತುಕೊಂಡೆ ತಂದೆ ತಾಯಿಯರಿಂದ ಕಲಿತ ನಾನು ಶಾಲೆಯಲ್ಲಿ ಮಕ್ಕಳಿಗೆ ಕಲಿಸುತ್ತಿದ್ದೆನೆ. ಈ ಹಾಡುವ ಪರಂಪರೆಯು ಉಳಿಯಬೇಕು ದೇವರ ಉತ್ಸವ, ಮದುವೆ ಶಾಸ್ತ್ರದ ಆಚರಣೆಯಲ್ಲಿ ಬರುವ ಇಳ್ಳೇವು ಶಾಸ್ತ್ರ, ಎಣ್ಣೆಶಾಸ್ತ್ರ, ಅಕ್ಕಿ ಇಕ್ಕೋಶಾ, ಕಂಕಣ ಕಟ್ಟೊ ಶಾಸ್ತ್ರ, ಜರಿಯೋಪದ, ದಾರೆಪದ, ಸಂಪ್ರದಾಯದ ಸೋಬಾನೆ ಗೀತೆಗಳನ್ನು ಹಾಡಿದರು.

ಮಹದೇಶ್ವರ, ಮಂಟೇಸ್ವಾಮಿ, ಸಾರಂಗಧರನ ಕಥೆ, ರಾಗಿಬೀಸುವ ಪದ, ತತ್ವಪದ, ಸೋಬಾನೆ ಪದ, ನಾಟಕದ ಗೀತೆಗಳನ್ನು ಗಿರಿಜಮ್ಮ ಹಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಸಾಹಿತಿ ಹನಿಯೂರು ಚಂದ್ರೇಗೌಡ, ರಾಜಶೇಖರ್ ಹಸಗುಂದಿ, ಶಿವರಾಜ್ ಜೆ, ಬ್ಯಾಡರಹಳ್ಳಿ, ಕೂಡ್ಲೂರು ಮಧು, ಕಾರ್ಯನಿರ್ವಹಣಾಧಿಕಾರಿ ಸರಸವಾಣಿ, ಕ್ಯೂರೇಟರ್ ಡಾ. ರವಿ ಯು.ಎಂ, ಸಂಚಾಲಕ ಡಾ. ಸಂದೀಪ್ ಕೆ.ಎಸ್., ಡಿಪ್ಲೊಮಾ ವಿದ್ಯಾರ್ಥಿಗಳು, ಲೋಕದ ಸಿಬ್ಬಂದಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

# ಬೈಕ್ ರ‍್ಯಾಲಿ ಯಶಸ್ವಿ

ಚಿಕ್ಕಬಳ್ಳಾಪುರ



ಶ್ರೀರಾಮಭಕ್ತಿ ರಾಷ್ಟ್ರ ಶಕ್ತಿ ಎನ್ನುವಂತೆ ಚಿಕ್ಕಬಳ್ಳಾಪುರದ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಮತ್ತು ಶ್ರೀರಾಮಸೇವಾ ಸಮಿತಿಯಿಂದ ನಗರದಲ್ಲಿ ಎರಡನೇ ವರ್ಷದ ರಾಮೋತ್ಸವ ಬೈಕ್ ರ‍್ಯಾಲಿ ಅದ್ದೂರಿಯಾಗಿ ನಡೆಯಿತು.

ನಗರ ಹೊರವಲಯದ ಆದಿಚುಂಚನಗಿರಿ ಶ್ರೀಗಳ ಸೂಲಾಲಪ್ಪನ ದಿನ್ನೆಯ ಶ್ರೀ ವೀರಾಂಜನೇಯಸ್ವಾಮಿ ದೇವಾಲಯದಿಂದ ಬೈಕ್ ರ‍್ಯಾಲಿಗೆ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಸಂದೀಪ ಬಿ ರೆಡ್ಡಿ ಅವರು ರಾಮೋತ್ಸವ ಬೈಕ್ ರಾಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ರ‍್ಯಾಲಿ ನೇತೃತ್ವ ವಹಿಸಿದ್ದ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ ಬೈಕ್ ರಾಲಿಗೂ ಮುನ್ನ ಮಾತನಾಡಿ, ಯಾವುದೇ ಆಸೆ, ಆಮಿಷಗಳು ಮತ್ತು ಲಾಭವಿಲ್ಲದೆ ಯುವ ಸಮುದಾಯ ದೊಡ್ಡ ಸಂಖ್ಯೆಯಲ್ಲಿ ರ‍್ಯಾಲಿಯಲ್ಲಿ ಭಾಗಿಯಾಗಿದೆ.

ಇದು ರಾಮನ ಭಕ್ತರು ಮಾಡುತ್ತಿರುವ ಸೇವೆಯೇ ನಿಷ್ಕಾಮ ಸೇವೆ ಇಷ್ಟು ಜನರು ರಾಮನ ಹೆಸರು ಕೂಗಿ ಹೇಳುತ್ತಿದ್ದಾರೆ ಇದು ಅವತಾರ ಪುರುಷ ಶ್ರೀ ರಾಮನ ಮಹಿಮೆಯೇ ಸರಿ ಎಂದ ಅವರು ರಾಲಿ ವೇಳೆ ತೀವ್ರ ಬಿಸಿಲು ಇತ್ತದರು ಬಿಸಿಲನ್ನ ಲೆಕ್ಕಿಸದೆ. ರ‍್ಯಾಲಿ ನಗರದ ಎಲ್ಲೆಡೆ ಸಂಚರಿಸಿ ಪೂರ್ಣಗೊಳಿಸಿದೆವು ಈ ರಾಲಿಯನ್ನು ಶ್ರೀರಾಮನವಮಿ ದಿನವೇ ಮಾಡಬೇಕು ಎಂದುಕೊಂಡಿದ್ದೆವು ಅಂದಿನ ದಿನ ಯುವಪಡೆ ಎಲ್ಲಡೆ ಆಚರಿಸುವ ರಾಮ ಸೇವಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುತ್ತಾರೆ ಆದ ಕಾರಣ ರ‍್ಯಾಲಿ ಒಂದು ಭಾನುವಾರ ಮಾಡೋಣ ಎಂದು ನಿರ್ಧರಿಸಿ ಅದನ್ನ ಪೂರ್ಣಗೊಳಿಸಿದ್ದೇವೆ ಎಂದರು ಇದರ ಮುಖ್ಯ ಉದ್ದೇಶ

ಜಾತಿ, ಮತಗಳನ್ನು ಮೀರಿ ಹಿಂದುತ್ವವನ್ನು ಕಟ್ಟಬೇಕಿದೆ. ರಾಮನ ಆದರ್ಶಗಳನ್ನು ಪಾಲಿಸಬೇಕು. ದೇಶವನ್ನು ರಾಮನ ಹೆಸರಿನಲ್ಲಿ ಸದೃಢಗೊಳಿಸಬೇಕೇಂಬುದಾಗಿದೆ ಎಂದರು.

ಶ್ರೀ ವೀರಾಂಜನೇಯ ಸ್ವಾಮಿ ಆಲಯ ಸಮಿಪದಿಂದ ಬಿ.ಬಿ.ರಸ್ತೆ, ಬಜಾರ್ ರಸ್ತೆ, ಗಂಗಮ್ಮನಗುಡಿ ರಸ್ತೆ, ಎಂ.ಜಿ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ ದ್ವಿಚಕ್ರ ವಾಹನ ಸವಾರರಿಂದ ರ‍್ಯಾಲಿ ಜರುಗಿತು. ರಾಮೋತ್ಸವ ಬೈಕ್ ರ‍್ಯಾಲಿ ಹಿನ್ನೆಲೆಯಲ್ಲಿ ನಗರವಿಡೀ ಕಳೆದ ಮೂರು ದಿನಗಳಿಂದಲೂ ಕೇಸರಿ ಮಯಗೊಳಿಸಲಾಗಿ ಕಂಗೊಳಿಸಿತ್ತು ಓಂಕಾರದ ಬ್ಯಾನರ್‌ಗಳು ಎಲ್ಲಡೆ ರಾರಾಜಿಸಿದವು.ನಗರ ಹಾಗೂ ಗ್ರಾಮೀಣ ಭಾಗಗಳಿಂದ ಬಂದಿದ್ದ ಯುವ ಸಮುದಾಯವು "ಜೈ ಶ್ರೀರಾಮ್ ಶ್ರೀರಾಮ್ ಜಯ ಜಯ ರಾಮ್" ಎನ್ನುವ ಘೋಷಣೆ ಮೊಳಗಿಸಿದರು.

ಈ ಸಂದರ್ಭದಲ್ಲಿ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ನ ಅಭಿಮಾನಿ ವೃಂದ ಹಾಗೂ ರಾಮೋತ್ಸವ ಸಮಿತಿಯ ಸುಹಾಸ್ ರಘು ಹರ್ಷ ಗಿರೀಶ್ ಸುನಿಲ್ ಹರಿಕೃಷ್ಣ ಭುವನ್ ನವೀನ್ ಮಂಚೇನಹಳ್ಳಿ, ಶ್ರೀಕಾಂತ್ ಸಿ.ವಿ. ಸೇರಿದಂತೆ ಚಿಕ್ಕಬಳ್ಳಾಪುರ ನಗರ ಹಾಗೂ ಗ್ರಾಮೀಣ ಪ್ರದೇಶಗಳ ಸಹಸ್ರಾರು ಯುವ ಪಡೆ ಬೈಕ್ ರಾಲಿಯಲ್ಲಿ ಪಾಲ್ಗೊಂಡಿದ್ದರು.

# ಮೇ.1ರಂದು ರೇಣುಕಾಯಲ್ಲಮ್ಮ ಹೂವಿನ ಕರಗ

ಕೋಲಾರ

ನಗರದ ಪಿ.ಸಿಬಡಾವಣೆಯ ರೇಣುಕಾಯಲ್ಲಮ್ಮ ದೇವಿ ಹೂವಿನ ಕರಗ ಮಹೋತ್ಸವ ಮೇ.1 ರಂದು ರಾತ್ರಿ ನಡೆಯುವ ಹಿನ್ನಲೆಯಲ್ಲಿ ಮಂಗಳವಾರ ದೇವಾಲಯದ ಹುಂಡಿ ತೆಗೆದು ಹಣವನ್ನು ರೇಣುಕಾಂಭ ಸೇವಾ ಸಮಿತಿ ಅಧ್ಯಕ್ಷ ಕೆ.ಗಣೇಶ್ ನೇತೃತ್ವದಲ್ಲಿ ಎಣಿಸಲಾಗಿದ್ದು, ಸುಮಾರು 61600 ರೂ ಸಂಗ್ರಹವಾಗಿತ್ತು.

ಸೇವಾ ಸಮಿತಿ ಅಧ್ಯಕ್ಷ ಕೆ.ಗಣೇಶ್, ಉಪಾಧ್ಯಕ್ಷ ಚಂದ್ರಪ್ರಕಾಶ್, ದೇವಾಲಯ ಸಮಿತಿ ಖಜಾಂಚಿ ಕೆ.ಎಸ್. ಮಂಜುನಾಥ್, ಕಾರ್ಯದರ್ಶಿ ಕಲಾ ರಮೇಶ್, ಉಪಕಾರ್ಯದರ್ಶಿ ವಿ.ಸುರೇಶ್,ಟಿ.ಸಂಪತ್ ಕುಮಾರ್,ಎ. ಮಹೇಶ್, ಮೇಸ್ತ್ರಿ ಕೃಷ್ಣಪ್ಪ, ಗೋವಿಂದರಾಜು, ಸಿ.ಶ್ರೀನಿವಾಸ್, ವೆಂಕಟೇಶಪ್ಪ, ಮುತ್ತಪ್ಪ, ಗಣೇಶ್, ಎಲ್ಐಸಿ ಮುನಿಯಪ್ಪ, ನಾಗರಾಜ್,ಯಲ್ಲಪ್ಪ, ವಿನಯ್, ನವೀನ್, ಭಾನು, ಅಕ್ಷಯ್ ಜೀವನ್, ಅನಿಲ್ ಕುಮಾರ್, ಗಂಗಾಧರ್ ಮತ್ತಿತರರು ಹುಂಡಿ ತೆಗೆದು ಹಣ ಎಣಿಸುವ ಕಾರ್ಯದಲ್ಲಿ ಭಾಗವಹಿಸಿದ್ದರು.

ಕರಗಮಹೋತ್ಸವ ಕಾರ್ಯಕ್ರಮಗಳು ಏ.28 ರಂದು ಸಂಜೆ ಧ್ವಜಾರೋಹಣದೊಂದಿಗೆ ಆರಂಭಗೊಳ್ಳಲಿದ್ದು, ಏ.29 ರಂದು ರಾತ್ರಿ 9 ಗಂಟೆಗೆ ಹಸಿ ಕರಗ, 30ರಂದು ದೀಪೋತ್ಸವ ಹಾಗೂ ಮೇ.1ರಾತ್ರಿ 8 ಗಂಟೆಗೆ ಹೂವಿನ ಕರಗಮಹೋತ್ಸವವಿದೆ.

ಮೇ.2 ರಂದು ಸಂಜೆ ಅಗ್ನಿಕುಂಡ ಪ್ರವೇಶ ಹಾಗೂ ರಾತ್ರಿ ಭಾರತಪಠಣ ಹಾಗೂ ಮೇ.3ರಂದು ಸಂಜೆ 5 ಗಂಟೆಗೆ ವಸಂತೋತ್ಸವವಿದೆ ಎಂದು ದೇವಾಲಯ ಸಮಿತಿ ಅಧ್ಯಕ್ಷ ಕೆ.ಗಣೇಶ್ ತಿಳಿಸಿದ್ದಾರೆ.

ಕರಗಮಹೋತ್ಸವ ಕಾರ್ಯಕ್ರಮಗಳು ಏ.28 ರಂದು ಸಂಜೆ ಧ್ವಜಾರೋಹಣದೊಂದಿಗೆ ಆರಂಭಗೊಳ್ಳಲಿದ್ದು, ಏ.29 ರಂದು ರಾತ್ರಿ 9 ಗಂಟೆಗೆ ಹಸಿ ಕರಗ, 30ರಂದು ದೀಪೋತ್ಸವ ಹಾಗೂ ಮೇ.1ರಾತ್ರಿ 8 ಗಂಟೆಗೆ ಹೂವಿನ ಕರಗಮಹೋತ್ಸವವಿದೆ.

# 'ಪ್ರತಿಯೊಬ್ಬರೂ ಆರೋಗ್ಯದತ್ತ ಹೆಚ್ಚಿನ ಗಮನ ಹರಿಸಿ'

ಚಿಕ್ಕಬಳ್ಳಾಪುರ

ಪ್ರತಿಯೊಬ್ಬರೂ ಆರೋಗ್ಯದತ್ತ ಹೆಚ್ಚಿನ ಗಮನ ಹರಿಸಿ ನೆಮ್ಮದಿಯ ಜೀವನ ನಡೆಸಬೇಕು ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್ ಸಂತೋಷ್ ಹೆಗಡೆ ಹೇಳಿದರು.

ನಗರ ಹೊರವಲಯದ ಜೈನ್ ಮಿಷನ್ ಆಸ್ಪತ್ರೆಯಲ್ಲಿ ನಿರ್ಮಿಸಲಾದ ಮೂರು ಹೊಸ ಬ್ಲಾಕ್‌ಗಳ ಲೋಕರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನುಷ್ಯರಲ್ಲಿ ತೃಪ್ತಿ ಮತ್ತು ಮಾನವೀಯತೆ ಇದ್ದರೆ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವೆಂದು ಅಭಿಪ್ರಾಯಪಟ್ಟರು. ದುರಾಸೆಯಿಂದ ದೂರವಿದ್ದು ತೃಪ್ತಿಯ ಬದುಕು ನಡೆಸಿದಾಗ ಮಾನವೀಯತೆ ಉಳಿಯುತ್ತದೆ. ಈ ಮೌಲ್ಯಗಳನ್ನು ಮಕ್ಕಳಿಗೆ ಬಾಲ್ಯದಲ್ಲೇ ಕಲಿಸುವುದು ಅಗತ್ಯವೆಂದು ಹೇಳಿದರು.

ವಿದ್ಯೆ ಮತ್ತು ಆರೋಗ್ಯ ಸರ್ಕಾರದ ಮುಖ್ಯ ಕರ್ತವ್ಯವಾಗಿದ್ದರೂ, ಈ ಕ್ಷೇತ್ರಗಳಲ್ಲಿ ಸರ್ಕಾರಗಳು ಹಿನ್ನಡೆಯಾಗಿವೆ ಎಂದು ಅವರು ಅಭಿಪ್ರಾಯಪಟ್ಟರು. ಸೇವಾ ಮನೋಭಾವ ಹೊಂದಿರುವ ಅನೇಕ ಖಾಸಗಿ ಸಂಸ್ಥೆಗಳು ಸರ್ಕಾರಕ್ಕಿಂತ ಹೆಚ್ಚು ಜನಸೇವೆ ಮಾಡುತ್ತಿವೆ.



ಜೈನ್ ಮಿಷನ್ ಆಸ್ಪತ್ರೆಯೂ ಉತ್ತಮ ಸೇವೆ ನೀಡುತ್ತಿರುವ ಸಂಸ್ಥೆಗಳಲ್ಲೊಂದು ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಸಂಸದ ಡಾ ಕೆ ಸುಧಾಕರ್ ಮಾತನಾಡಿ, ಆರೋಗ್ಯವಂತ ವ್ಯಕ್ತಿಯೇ ನಿಜವಾದ ಶ್ರೀಮಂತ ಎಂದು ಹೇಳಿದರು. "ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ" ಎಂಬ ಮನೋಭಾವನೆಯೊಂದಿಗೆ ಆಹಾರ, ಪರಿಸರ, ದೈಹಿಕ ಚಟುವಟಿಕೆ ಹಾಗೂ ಮಾನಸಿಕ ನೆಮ್ಮದಿಗೆ ಸಮಾನ ಗಮನ ನೀಡಬೇಕು ಎಂದರು.

ಅವರು ಮಹಾವೀರರು ಉದಾಹರಣೆಯನ್ನು ಉಲ್ಲೇಖಿಸಿ, ಅಹಿಂಸೆ, ಸತ್ಯ ಮತ್ತು ದಯೆ ಎಂಬ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಜೀವನದಲ್ಲಿ ನಿಜವಾದ ನೆಮ್ಮದಿ ಸಿಗುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ವಿವಿಧ ಗಣ್ಯರು, ದಾನಿಗಳು, ವೈದ್ಯರು ಮತ್ತು ಸಮಾಜದ ಪ್ರಮುಖರು ಉಪಸ್ಥಿತರಿದ್ದರು.

# ಬೀದಿ ನಾಯಿಗಳ ಹಾವಳಿಗೆ ಬೆಚ್ಚಿದ ಜನತೆ



ಚಿಕ್ಕಬಳ್ಳಾಪುರ

ಜಿಲ್ಲೆಯ ಜಿಲ್ಲಾ ಕೇಂದ್ರದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ನಾಗರಿಕರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ನಗರದ ಪ್ರಶಾಂತನಗರ, ಸುಣ್ಣಕಲ್ಲು ಬೀದಿ, ಜೈ ಭೀಮ್ ನಗರ, ಸಾಧು ಮಠ ಸರ್ಕಲ್, ಕೋಟೆ, ಕಂದವಾರಪೇಟೆ, ಸರ್ ಎಂ.ವಿ. ಬಡಾವಣೆ ಸೇರಿದಂತೆ ಹಲವು ಪ್ರದೇಶಗಳಲ್ಲಿ ಮಕ್ಕಳು, ಮಹಿಳೆಯರು ಮತ್ತು ಬೈಕ್ ಸವಾರರಿಗೆ ಮುಕ್ತವಾಗಿ ಸಂಚರಿಸಲು ಭಯ ಎದುರಾಗಿದೆ.

ರೇಬೀಸ್ ಭೀತಿ, ನಾಯಿ ಕಡಿತ ಪ್ರಕರಣಗಳ ಹೆಚ್ಚಳ ಮತ್ತು ನಿಯಂತ್ರಣವಿಲ್ಲದ ಸಂತಾನೋತ್ಪತ್ತಿಯಿಂದ ಸಮಸ್ಯೆ ಗಂಭೀರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ನಗರಸಭೆ ಅಧಿಕಾರಿಗಳು ಹಾಗೂ ಸಂಘ ಸಂಸ್ಥೆಗಳು ತಕ್ಷಣ ಎಚ್ಚೆತ್ತು ಸಂತಾನಹರಣ ಶಸ್ತ್ರಚಿಕಿತ್ಸೆ (ಎಬಿಸಿ) ಮತ್ತು ಲಸಿಕೆ ಕಾರ್ಯಕ್ರಮಗಳನ್ನು ತೀವ್ರಗೊಳಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

**ಭಯದ ವಾತಾವರಣ ಹೆಚ್ಚಳ:**

ರಾತ್ರಿ ಮಾತ್ರವಲ್ಲದೆ ಬೆಳಗಿನ ವೇಳೆಯಲ್ಲಿಯೂ ಬೈಕ್ ಸವಾರರನ್ನು ಬೆನ್ನಟ್ಟುವುದು, ಮಕ್ಕಳ ಮೇಲೆ ದಾಳಿ ನಡೆಸುವುದು ಸಾಮಾನ್ಯ ಘಟನೆಗಳಾಗಿವೆ ಎಂದು ನಿವಾಸಿಗಳು ತಿಳಿಸಿದ್ದಾರೆ. ನಾಯಿ ಕಡಿತದಿಂದ ರೇಬೀಸ್ ಪ್ರಕರಣಗಳು ಹೆಚ್ಚುವ ಭೀತಿ ಹೆಚ್ಚುತ್ತಿರುವುದರಿಂದ ಜನರು ಆತಂಕದಲ್ಲಿದ್ದಾರೆ.

ಸ್ಥಳೀಯ ಸಂಸ್ಥೆಗಳ ನಿರ್ಲಕ್ಷ್ಯದಿಂದ ಬೀದಿ ನಾಯಿಗಳ ಸಂಖ್ಯೆ ಹೆಚ್ಚುತ್ತಿರುವುದಾಗಿ ಆರೋಪಗಳು ಕೇಳಿಬರುತ್ತಿವೆ. ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಿಂದ ನಾಯಿಗಳನ್ನು ತೆರವುಗೊಳಿಸಲು ನ್ಯಾಯಾಲಯದ ಸೂಚನೆಗಳಿದ್ದರೂ, ಅಧಿಕಾರಿಗಳು ಸಮರ್ಪಕ ಕ್ರಮ ಕೈಗೊಳ್ಳದಿರುವುದು ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿದೆ.

ಬೀದಿ ನಾಯಿಗಳನ್ನು ಕೊಲ್ಲುವುದು ಕಾನೂನುಬಾಹಿರವಾಗಿರುವುದರಿಂದ, ಅವುಗಳ ಸಂತಾನೋತ್ಪತ್ತಿಯನ್ನು ನಿಯಂತ್ರಿಸುವುದು, ಲಸಿಕೆ ನೀಡುವುದು ಹಾಗೂ ಆಶ್ರಯ ತಾಣಗಳನ್ನು ನಿರ್ಮಿಸುವುದು ಶಾಶ್ವತ ಪರಿಹಾರವೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಈ ಹಿನ್ನೆಲೆಯಲ್ಲಿ ನಗರಸಭೆ ತಕ್ಷಣ ಕ್ರಮ ಕೈಗೊಂಡು ಸಾರ್ವಜನಿಕರ ಸುರಕ್ಷತೆ ಖಚಿತಪಡಿಸಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# 'ಹಿಂದೂ ಧರ್ಮದಲ್ಲಿನ ಜಾತೀಯತೆ ನಿವಾರಣೆಯಾಗದೆ ದೇಶದ ಪ್ರಗತಿ ಅಸಾಧ್ಯ'

ತುಮಕೂರು

ಹಿಂದೂ ಧರ್ಮ ಬದಲಾವಣೆಯಾಗಬೇಕು. ಜಾತಿಯ ವ್ಯವಸ್ಥೆ ದೇಶದಲ್ಲಿ ಹೋಗಬೇಕು. ಎಲ್ಲಿಯವರೆಗೆ ದೇಶದಲ್ಲಿ ಜಾತಿ ವ್ಯವಸ್ಥೆ ಹೋಗುವುದಿಲ್ಲವೋ ಅಲ್ಲಿಯವರೆಗೂ ದೇಶದ ಜನರು ಒಂದೇ ಎಂಬ ಭಾವನೆ ಬರುವುದಿಲ್ಲ ಹಾಗೂ ದೇಶದ ಪ್ರಗತಿಯೂ ಸಾಧ್ಯವಿಲ್ಲ ಎಂದು ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ತುಮಕೂರು ಮಹಾನಗರ ಪಾಲಿಕೆ, ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಮಹಾನಗರಪಾಲಿಕೆ ಮುಂಭಾಗದಲ್ಲಿ ಮಂಗಳವಾರ ಆಯೋಜಿಸಿದ್ದ ಡಾ: ಬಿ.ಆರ್.ಅಂಬೇಡ್ಕರ್ ಅವರು 135ನೇ ಹಾಗೂ ಡಾ: ಬಾಬು ಜಗಜೀವನರಾಮ್ ಅವರ 119ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಾಬ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ಕೊನೆ ದಿನಗಳಲ್ಲಿ ಅತ್ಯಂತ ಅಸಮಾನತೆ ಇರುವ ಹಿಂದೂ ಧರ್ಮದಲ್ಲಿ ನಾನು ಸಾಯುವುದಿಲ್ಲ ಎಂದು ಹೇಳಿ ಸಮಾನತೆಯನ್ನು ಸಾರುವ ಬೌದ್ಧ ಧರ್ಮಕ್ಕೆ ಮತಾಂತರವಾದರು. ಈ ಸಂದರ್ಭದಲ್ಲಿ ಅನೇಕರು ಟೀಕೆ ಮಾಡಿದರು. ಆದರೆ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜಾತಿ ತಾರತಮ್ಯ ಇರುವ ಧರ್ಮದಲ್ಲಿ ಇರಲು ಬಯಸಲಿಲ್ಲ. ಈ ಹಿನ್ನೆಲೆಯಲ್ಲಿ ವೈಯಕ್ತಿಕವಾಗಿ ಹೇಳುವುದಾದರೆ ಹಿಂದೂ ಧರ್ಮ ಬದಲಾಗಬೇಕು, ಹಿಂದೂ ಧರ್ಮದಲ್ಲಿನ ಜಾತೀಯತೆ ಹೋಗಬೇಕು. ಆಗ ಮಾತ್ರ ಈ ಧರ್ಮ ಉಳಿಯಲಿದೆ ಎಂದರು.

ಭಾರತ ಅತಿದೊಡ್ಡ ಜನಸಂಖ್ಯೆ ಹೊಂದಿರುವ ದೇಶ ಮತ್ತು ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ದೇಶವಾಗಿದೆ. ಅಂತೆಯೇ, ಈ ದೇಶದಲ್ಲಿ ವರ್ಣಾಶ್ರಮ ಪದ್ಧತಿ ಹೇಗೆ ಬಂದಿದೆಯೋ ಗೊತ್ತಿಲ್ಲ,



ಅದನ್ನೂ ಯಾರೂ ಸಮರ್ಥಿಸಿಕೊಳ್ಳುವುದಿಲ್ಲ. ಜಗತ್ತಿನ ಯಾವುದೇ ದೇಶದಲ್ಲಿ ಇಲ್ಲದ ಅಸಮಾನತೆಯ ಕಂದಕ ನಮ್ಮ ದೇಶದಲ್ಲಿದ್ದು, 5000 ವರ್ಷಗಳ ಇತಿಹಾಸದಲ್ಲಿ ಅಸಮಾನತೆಯ ತಾರತಮ್ಯವನ್ನು ಜನರು ಅನುಭವಿಸಿದ್ದಾರೆ ಎಂದರು.

ಬಾಬಾ ಸಾಹೇಬರು ಮತ್ತು ಬಾಬು ಜಗಜೀವನರಾಮ್ ಅವರು ಈ ಅಸಮಾನತೆಯ ತಾರತಮ್ಯ ಅನುಭವಿಸಿದ ಇಬ್ಬರು ಮಹಾನ್ ನಾಯಕರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ ಸ್ವಂತ ಬದುಕಿನ ನೋವು ಮತ್ತು ಅಪಮಾನಗಳನ್ನು ದೇಶದ ಜನರೊಂದಿಗೆ ಹಂಚಿಕೊಂಡರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರ ಕೆಲವು ವಿಚಾರಗಳಲ್ಲಿ ಸಹಮತವಿಲ್ಲದಿದ್ದರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾದರು.

ಹಂದಿ, ನಾಯಿಗಳು ಕುಡಿಯಬಹುದಾದ ಕೆರೆ ಕಟ್ಟೆಗಳನ್ನು ಶೋಷಿತರು ಮುಟ್ಟಬಾರದು ಎಂಬ ಈ ತಾರತಮ್ಯ ಅವರ ಮನಸ್ಸಿನಲ್ಲಿ ಆಳವಾಗಿ ಉಳಿದಿತ್ತು. ಮುಂದೆ ಭಾರತದ ಸಂವಿಧಾನ ರಚನೆ ಸಂದರ್ಭದಲ್ಲಿ ಅವರು ಜಗತ್ತಿನ ಶ್ರೇಷ್ಠ ಪ್ರಜಾಪ್ರಭುತ್ವವನ್ನು ಸಂವಿಧಾನದ ಮೂಲಕ ಪ್ರತಿಪಾದಿಸಿದರು. ಶ್ರೀಮಂತನಿಗೂ ಶ್ರೀಸಾಮಾನ್ಯನಿಗೂ ಒಂದೇ ಹಕ್ಕು ಎಂಬ ಮಹತ್ತರ ನಿರ್ಧಾರವನ್ನು ಸಂವಿಧಾನದಲ್ಲಿ ಅವರು ಕೊಟ್ಟಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಅಶ್ವಿಜ, ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ.ಅಶೋಕ್, ಜಿಲ್ಲಾ ಗ್ಯಾರಂಟಿ ಸಮಿತಿಯ ಅಧ್ಯಕ್ಷ ಚಂದ್ರಶೇಖರಗೌಡ, ಅಪರ ಜಿಲ್ಲಾಧಿಕಾರಿ ಡಾ.ಎನ್. ತಿಪ್ಪೇಸ್ವಾಮಿ, ಮಹಾನಗರ ಪಾಲಿಕೆ ಆಯುಕ್ತೆ ಶುಭ ಬಿ., ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಸಿ.ಗೋಪಾಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಶಶಿಧರ್, ತುಮಕೂರು ಉಪ ವಿಭಾಗಾಧಿಕಾರಿ ನಾಹೀದಾ ಜಮ್ ಜಮ್, ಜಿ.ಪಂ. ಉಪ ಕಾರ್ಯದರ್ಶಿಗಳಾದ ಸಂಜೀವಪ್ಪ, ಈಶ್ವರಪ್ಪ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಸೋನಿಯಾ ವರ್ಣೇಕರ್, ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ನರಸಿಂಹ ಮೂರ್ತಿ, ಮತ್ತಿತರರು ಉಪಸ್ಥಿತರಿದ್ದರು.

# 135ನೇ ಅಂಬೇಡ್ಕರ್ ಜಯಂತಿ ಸಂಭ್ರಮ

ಬೇತಮಂಗಲ

ಇಲ್ಲಿಗೆ ಸಮೀಪದ ಕ್ಯಾಸಂಬಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅತ್ಯಂತ ಸಡಗರ ಮತ್ತು ಗೌರವಪೂರ್ವಕವಾಗಿ ಆಚರಿಸಲಾಯಿತು.

ಈ ವೇಳೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಶ್ಮಿ ಅವರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು, ಅಂಬೇಡ್ಕರ್ ಅವರ ಆಶಯದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳು ತಲುಪಿದಾಗ ಮಾತ್ರ ಇಂತಹ ಜಯಂತಿ ಆಚರಣೆಗಳು ಸಾರ್ಥಕವಾಗುತ್ತವೆ ಎಂದರು.

ಈ ದಿನ ಡಾ ಬಿ ಆರ್ ಅಂಬೇಡ್ಕರ್ ಅವರು ತಂದು ಕೊಟ್ಟಂತಹ ಸಂವಿಧಾನದಿಂದ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸಮಾನತೆಯಿಂದ ಬದಕಲು ಸಾಧ್ಯವಾಗುತ್ತಿದೆ ಎಂದರು.

ಈ ವೇಳೆ ದಲಿತ ಮುಖಂಡ ಸಾಮ್ರಾಟ್ ಕೃಷ್ಣ ಮೂರ್ತಿ ಮಾತನಾಡಿ, ಅಂಬೇಡ್ಕರ್ ಅವರು ನೀಡಿದ ಸಂವಿಧಾನವು ಭಾರತದ ಪ್ರಜಾಪ್ರಭುತ್ವದ ಅಡಿಪಾಯವಾಗಿದೆ.

ಅವರ ಶಿಕ್ಷಣ ಸಂಘಟನೆ ಮತ್ತು ಹೋರಾಟಎಂಬ



ಮಂತ್ರ ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಬೇಕು ಹಾಗೆಯೇ ಅಂಬೇಡ್ಕರ್ ಅವರು ಒಂದು ಜಾತಿಗೆ ಸೀಮಿತವಲ್ಲ ಎಲ್ಲಾ ಜಾತಿ ಧರ್ಮದವರು ಅವರ ಆದರ್ಶ ತತ್ವಗಳನ್ನು ಜೀವನದಲ್ಲಿ ರೂಪಿಸಿಕೊಳ್ಳಬೇಕು ಎಂದು ನುಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ರಶ್ಮಿ, ಮಾಜಿ ಗ್ರಾಪಂ ಅಧ್ಯಕ್ಷರಾದ ಸುನೀತಾ ಆನಂದ್ ರೆಡ್ಡಿ ಜಯರಾಮ್ ರೆಡ್ಡಿ ಮಾಜಿ ಗ್ರಾಪಂ ಉಪಾಧ್ಯಕ್ಷ ಅಂಜಲಿ ಪ್ರತಾಪ್ ಮಾಜಿ ಗ್ರಾಪಂ ಸದಸ್ಯರಾದ, ರವಿ, ದಲಿತ ಮುಖಂಡರಾದ ಸಾಮ್ರಾಟ್ ಕೃಷ್ಣ ಮೂರ್ತಿ, ಗೋಪಾಲ್, ಆನಂದ್, ಸೇರಿದಂತೆ ಸಿಬ್ಬಂದಿ ಹಾಗೂ ಉಪಸ್ಥಿತರಿದ್ದರು.

# ಪೊಲೀಸ್ ಕಛೇರಿಯಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ

ಕೆಜಿಎಫ್



ಭಾರತರತ್ನ, ಸಂವಿಧಾನ ಶಿಲ್ಪಿ ಡಾ॥ ಬಿ.ಆರ್. ಅಂಬೇಡ್ಕರ್ ರವರ 135ನೇ ಜನ್ಮದಿನಾಚರಣೆಯನ್ನು ಕೆಜಿಎಫ್‌ನ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಮಂಗಳವಾರದಂದು ಆಚರಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಅವರು ಡಾ॥ ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ಸಂವಿಧಾನ ಶಿಲ್ಪಿ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಆದರ್ಶ ಮತ್ತು ತತ್ವಗಳು, ಸರ್ವಕಾಲಿಕವಾಗಿದ್ದು, ಅವರ ಮಾರ್ಗದರ್ಶನವನ್ನು ಅಳವಡಿಸಿಕೊಂಡು ಮುನ್ನಡೆಯುವಂತೆ ಕರೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಅವರ ಅಧ್ಯಕ್ಷತೆಯಲ್ಲಿ ನಡೆದ ಡಾ॥ ಬಿ.ಆರ್. ಅಂಬೇಡ್ಕರ್ ರವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಲಕ್ಷ್ಮಯ್ಯ ಮತ್ತು ಜಿಲ್ಲಾ ಪೊಲೀಸ್ ಕಛೇರಿಯ ಅಧಿಕಾರಿ ಹಾಗೂ ಲಿಪಿಕ ಸಿಬ್ಬಂದಿಗಳು ಭಾಗವಹಿಸಿದ್ದರು.

# ಸರಗಳ್ಳತನ ಪ್ರಕರಣ: ಓರ್ವನ ಬಂಧನ

ಕನಕಪುರ

ಕನಕಪುರ ಟೌನ್ ಪೊಲೀಸ್ ಠಾಣೆ ವ್ಯಾಪ್ತಿಯ ವಿವೇಕಾನಂದ ನಗರದ ರಸ್ತೆಯಲ್ಲಿ ನಿಂತಿದ್ದ ಮಹಿಳೆಯೊಬ್ಬರ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಕಿತ್ತು ಕೊಂಡು ಪರಾರಿಯಾಗಿದ್ದ, ಹಿನ್ನೆಲೆಯಲ್ಲಿ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು.

ದೂರಿನ ಮೇರೆಗೆ ಕನಕಪುರ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದರು.

ಸರಗಳ್ಳತನ ಮಾಡಿದ್ದ ಆರೋಪಿಯನ್ನು ಸೆರೆ ಹಿಡಿದು ವಿಚಾರಣೆ ನಡೆಸಿ, ಸುಲಿಗೆ ಮಾಡಲಾಗಿದ್ದ ಸುಮಾರು 4,00,000/– ರೂ ಮೌಲ್ಯದ 25 ಗ್ರಾಂ ಚಿನ್ನದ ಸರವನ್ನು ಹಾಗೂ ಚಿನ್ನವನ್ನು ಮಾರಿ ಖರೀದಿ ಮಾಡಿದ್ದ 1 ಕಾರು ಮತ್ತು 1 ದ್ವಿಚಕ್ರ ವಾಹನವನ್ನು ವಶ ಪಡಿಸಿಕೊಂಡಿದ್ದಾರೆ.

ಪ್ರಕರಣವನ್ನು ಪತ್ತೆ ಮಾಡುವಲ್ಲಿ ನಗರ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ತಂಡ ಯಶಸ್ವಿಯಾಗಿದೆ.

# ಕುತಂತ್ರಿ ರಾಜಕಾರಣಿಗಳಿಗೆ ತಕ್ಕ ಪಾಠ: ಪಿವಿಸಿ ಮಣಿ




ಬಂಗಾರಪೇಟೆ

ಕುತಂತ್ರಿ ರಾಜಕಾರಣಿಗಳಿಗೆ ತಕ್ಕ ಪಾಠ ಕಲಿಸುವ ಸಮಯ ಬಂದಿದೆ ಎಂದು ಸುಹೇಲ್ದೇವ್ ಭಾರತೀಯ ಸಮಾಜ್ ಪಕ್ಷದ ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ ಪಿವಿಸಿ ಮಣಿ ವಾಗ್ದಾಳಿ ನಡೆಸಿದರು.

ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆದ ಕಾರ್ಯಕ್ರಮದ ಬಳಿಕ ನಗರದ ಹೊರವಲಯದಲ್ಲಿರುವ ಪಕ್ಷದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಾಜಕೀಯವಾಗಿ ಬೆಳೆಯಲು ಅವಕಾಶ ನೀಡದೆ, ದಲಿತರನ್ನೇ ದಲಿತರ ವಿರುದ್ಧ ಬಳಸುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಬಿ ಆರ್ ಅಂಬೇಡ್ಕರ್ ಅವರು ಒಂದು ಜಾತಿಗೆ ಸೀಮಿತ ನಾಯಕರು ಅಲ್ಲ, ಎಲ್ಲಾ ವರ್ಗಗಳ ಮಹಾನಾಯಕರು. ಸಮಾನತೆ, ಶಿಕ್ಷಣ, ಸ್ವಾಭಿಮಾನ ಮತ್ತು ಹಕ್ಕುಗಳ ಹೋರಾಟಕ್ಕೆ ದಿಕ್ಕು ತೋರಿದ ಮಹಾಮನುಷ್ಯರು ಎಂದು ಹೇಳಿದರು.

ಈ ವೇಳೆ ರಾಜ್ಯಾಧ್ಯಕ್ಷ ಅಭಿಮನ್ಯು ಮಣಿ ಮಾತನಾಡಿ, ಮೀಸಲಾತಿಯಿಂದ ಆಯ್ಕೆಯಾದ ಜನಪ್ರತಿನಿಧಿಗಳು ದಲಿತರ ಮೇಲಿನ ದೌರ್ಜನ್ಯ ತಡೆಯುವಲ್ಲಿ ವಿಫಲರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ದಲಿತರ ಮೇಲೆ ಅನ್ಯಾಯ ಮತ್ತು ದೌರ್ಜನ್ಯಗಳು ಹೆಚ್ಚುತ್ತಿವೆ. ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು, ಇಲ್ಲವಾದರೆ ಪಕ್ಷದ ವತಿಯಿಂದ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ದಲಿತರು, ಅಲ್ಪಸಂಖ್ಯಾತರು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳು ಸಮಾಜದ ಮುಖ್ಯವಾಹಿನಿಗೆ ಬರಲು ಅಂಬೇಡ್ಕರ್ ಅವರ ಸಂವಿಧಾನವೇ ಬಲವಾದ ಅಡಿಪಾಯವಾಗಿದೆ. ಅವರ ಆದರ್ಶಗಳು ಮತ್ತು ಸಂವಿಧಾನಿಕ ಮೌಲ್ಯಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡರೆ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

3S ಭಾರತ ಸಾರಥಿ
16/04/2026
ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ
ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com

**ಈ ಕಾರ್ಯತಂತ್ರದ ನಿರ್ಣಾಯಕ ಆಧಾರಸ್ತಂಭವೆಂದರೆ ಹುದುಗುವಿಕೆ(ಫರ್ಮೆಂಟೇಷನ್) ಆಧಾರಿತ ಉತ್ಪಾದನಾ ಸಾಮರ್ಥ್ಯಗಳ ಅಭಿವೃದ್ಧಿ. ಪ್ರತಿಜೀವಕಗಳು, ಲಸಿಕೆಗಳು, ಕಿಣ್ವಗಳು ಮತ್ತು ಜೀವಶಾಸ್ತ್ರಗಳ ತಯಾರಿಕೆಯಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದರೂ, ಈ ವಿಭಾಗವು ದೀರ್ಘಕಾಲದಿಂದ ಆಮದು-ಅವಲಂಬಿತವಾಗಿದೆ. ಮೂಲಸೌಕರ್ಯದಲ್ಲಿ ಹೂಡಿಕೆ ಮಾಡುವ ಮೂಲಕ, ತಂತ್ರಜ್ಞಾನ ಅಭಿವೃದ್ಧಿ ಮತ್ತು ವರ್ಗಾವಣೆಯನ್ನು ಸುಗಮಗೊಳಿಸುವ ಮೂಲಕ ಹಾಗೂ ಉದ್ದೇಶಿತ ಪ್ರೋತ್ಸಾಹಕಗಳನ್ನು ನೀಡುವ ಮೂಲಕ, ಭಾರತವು ದೇಶೀಯ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಈ ಕಾರ್ಯತಂತ್ರದ ಕ್ಷೇತ್ರದಲ್ಲಿ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಕೆಲಸ ಮಾಡುತ್ತಿದೆ. ಭಾರತದ ಕ್ಲಿನಿಕಲ್ ಸಂಶೋಧನಾ ಪರಿಸರ ವ್ಯವಸ್ಥೆಯ ವಿಸ್ತರಣೆಯೂ ಅಷ್ಟೇ ಮಹತ್ವದ್ದಾಗಿದೆ. 1,000 ಮಾನ್ಯತೆ ಪಡೆದ ಕ್ಲಿನಿಕಲ್ ಟ್ರಯಲ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇದು ಜಾಗತಿಕ ಔಷಧ ಅಭಿವೃದ್ಧಿ ತಾಣವಾಗಿ ಭಾರತದ ಸ್ಥಾನವನ್ನು ಗಣನೀಯವಾಗಿ ಹೆಚ್ಚಿಸುತ್ತದೆ.**

### ಭಾರತವನ್ನು ಬಯೋಫಾರ್ಮಾ ಮತ್ತು ಅಧಿಕ ಮೌಲ್ಯದ ಚಿಕಿತ್ಸೆಗಳ ಪ್ರಧಾನ ಕೇಂದ್ರವಾಗಿಸಲು ಪ್ರಮಾಣದಿಂದ ನಾವೀನ್ಯತೆಯೆಡೆಗೆ

# ಬದಲಾದ ಭಾರತದ ಔಷಧೀಯ ಕಾರ್ಯತಂತ್ರ

ಜಾಗತಿಕ ಔಷಧೀಯ ವಲಯದಲ್ಲಿ, 'ಬಯೋಲಾಜಿಕ್ಸ್'(ಜೀವಜನ್ಯ ಔಷಧ), 'ಬಯೋಸಿಮಿಲರ್ಸ್'(ತದ್ರೂಪ ಔಷಧ) ಮತ್ತು 'ವಿಶೇಷ ಔಷಧಗಳು' ಈಗ ಔಷಧೀಯ ಆದಾಯದ ಶೇ. 40ಕ್ಕಿಂತ ಹೆಚ್ಚು ಪಾಲನ್ನು ಹೊಂದಿವೆ. ಜೆನೆರಿಕ್ ಔಷಧಿಗಳಲ್ಲಿನ ನಾಯಕತ್ವದಿಂದಾಗಿ 'ವಿಶ್ವದ ಔಷಧಾಲಯ' ಎಂದು ದೀರ್ಘಕಾಲದಿಂದ ಕರೆಯಲ್ಪಡುತ್ತಿದ್ದ ಭಾರತದ ಔಷಧ ಉದ್ಯಮವು ಈಗ ಪ್ರಮಾಣದಿಂದ ನಾವೀನ್ಯತೆಗೆ ತನ್ನ ಮಾರ್ಗವನ್ನು ಬದಲಾಯಿಸಲು ಸಜ್ಜಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ, ಜೆನೆರಿಕ್ ಔಷಧಗಳಲ್ಲಿ ಭಾರತವು ತನ್ನ ಸಾಮರ್ಥ್ಯ ಉಳಿಸಿಕೊಳ್ಳುವುದರ ಜೊತೆಗೆ, ಈ ಉದಯೋನ್ಮುಖ ವಿಭಾಗಗಳಲ್ಲಿ ಹೆಚ್ಚಿನ ಪಾಲು ಪಡೆಯಲು ಕೇಂದ್ರ ಸರ್ಕಾರ ದೂರದೃಷ್ಟಿಯ ನೀತಿ ಚೌಕಟ್ಟನ್ನು ರೂಪಿಸುತ್ತಿದೆ.

2026–27ರ ಕೇಂದ್ರ ಬಜೆಟ್‌ನಲ್ಲಿ ರೂ.10,000 ಕೋಟಿ 'ಮಿಷನ್ ಬಯೋಫಾರ್ಮಾ ಉತ್ಪಾದನಾ ಶಕ್ತಿ'ಯ ಘೋಷಣೆಯು ಈ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆಯಾಗಿದೆ. ಮುಂದಿನ 8 ರಿಂದ 10 ವರ್ಷಗಳಲ್ಲಿ ಬಯೋಫಾರ್ಮಾ ನಾವೀನ್ಯತೆ ಮತ್ತು ಹೆಚ್ಚಿನ ಮೌಲ್ಯದ ಚಿಕಿತ್ಸಕಗಳ ಜಾಗತಿಕ ಕೇಂದ್ರವಾಗಿ ವಿಕಸನಗೊಳ್ಳುವ ಭಾರತದ ಸಂಕಲ್ಪವನ್ನು ಇದು ಸೂಚಿಸುತ್ತದೆ. ಈ ದೃಷ್ಟಿಕೋನವು ವೈಜ್ಞಾನಿಕ ಸಾಮರ್ಥ್ಯಗಳನ್ನು ಹೆಚ್ಚಿಸಲು ಹಾಗೂ ನಾವೀನ್ಯತೆ ನೇತೃತ್ವದ ಉದ್ಯಮಗಳ ಉತ್ತೇಜನ ಮತ್ತು ಮುಂದಿನ ಪೀಳಿಗೆಯ ಔಷಧಗಳ ತಯಾರಿಕೆಯಲ್ಲಿ ಭಾರತವು ನಾಯಕತ್ವ ವಹಿಸಲು ಅನುವು ಮಾಡಿಕೊಡುತ್ತದೆ.

ಈ ಕಾರ್ಯಕ್ರಮವು 'ಬಯೋಲಾಜಿಕ್ಸ್', 'ಬಯೋಸಿಮಿಲರ್ಸ್' ಮತ್ತು ಸುಧಾರಿತ ಚಿಕಿತ್ಸಾ ವಿಧಾನಗಳಲ್ಲಿ ದೇಶೀಯ ಸಾಮರ್ಥ್ಯಗಳನ್ನು ವೇಗಗೊಳಿಸುವ ಗುರಿ ಹೊಂದಿದೆ. ಇದು ಜೈವಿಕ ಔಷಧ (ಬಯೋಫಾರ್ಮಾಸ್ಯುಟಿಕಲ್ಸ್) ಸೇರಿದಂತೆ ಜೀವ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿ ಹೊಂದಿರುವ 'ಫಾರ್ಮಾ ಮೆಡ್ ಟೆಕ್ ವಲಯ', 'ಸಂಶೋಧನೆ ಅಭಿವೃದ್ಧಿ ಮತ್ತು ನಾವೀನ್ಯತೆ ಯೋಜನೆ', 'ಬಯೋನೆಸ್ಟ್' ಇತ್ಯಾದಿ ಉಪಕ್ರಮಗಳಿಗೆ ಪೂರಕವಾಗಿದೆ. ಈ ಉಪಕ್ರಮಗಳು ಔಷಧ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನೇತೃತ್ವದಲ್ಲಿ ಮುನ್ನಡೆಸಲ್ಪಡುತ್ತಿವೆ. ಒಟ್ಟಾರೆಯಾಗಿ, ಭಾರತದ ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು, ಉದ್ಯಮ–ಶೈಕ್ಷಣಿಕ ಸಹಯೋಗವನ್ನು ಉತ್ತೇಜಿಸಲು ಮತ್ತು ಜೆನೆರಿಕ್ ಔಷಧಗಳಿಂದ ನಾವೀನ್ಯತೆ ಆಧಾರಿತ ಔಷಧ ಅನ್ವೇಷಣೆ ಮತ್ತು ಅಭಿವೃದ್ಧಿಗೆ ಪರಿವರ್ತನೆಯನ್ನು ಸಾಧ್ಯವಾಗಿಸಲು ಈ ಉಪಕ್ರಮಗಳನ್ನು ವಿನ್ಯಾಸಗೊಳಿಸಲಾಗಿದೆ.

ಈ ಕಾರ್ಯತಂತ್ರದ ನಿರ್ಣಾಯಕ ಆಧಾರಸ್ತಂಭವೆಂದರೆ ಹುದುಗುವಿಕೆ(ಫರ್ಮೆಂಟೇಷನ್) ಆಧಾರಿತ ಉತ್ಪಾದನಾ ಸಾಮರ್ಥ್ಯಗಳ ಅಭಿವೃದ್ಧಿ. ಪ್ರತಿಜೀವಕಗಳು, ಲಸಿಕೆಗಳು, ಕಿಣ್ವಗಳು



ಮತ್ತು ಜೀವಶಾಸ್ತ್ರಗಳ ತಯಾರಿಕೆಯಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದರೂ, ಈ ವಿಭಾಗವು ದೀರ್ಘಕಾಲದಿಂದ ಆಮದು–ಅವಲಂಬಿತವಾಗಿದೆ. ಮೂಲಸೌಕರ್ಯದಲ್ಲಿ ಹೂಡಿಕೆ ಮಾಡುವ ಮೂಲಕ, ತಂತ್ರಜ್ಞಾನ ಅಭಿವೃದ್ಧಿ ಮತ್ತು ವರ್ಗಾವಣೆಯನ್ನು ಸುಗಮಗೊಳಿಸುವ ಮೂಲಕ ಹಾಗೂ ಉದ್ದೇಶಿತ ಪ್ರೋತ್ಸಾಹಕಗಳನ್ನು ನೀಡುವ ಮೂಲಕ, ಭಾರತವು ದೇಶೀಯ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ಈ ಕಾರ್ಯತಂತ್ರದ ಕ್ಷೇತ್ರದಲ್ಲಿ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಕೆಲಸ ಮಾಡುತ್ತಿದೆ.

ಭಾರತದ ಕ್ಲಿನಿಕಲ್ ಸಂಶೋಧನಾ ಪರಿಸರ ವ್ಯವಸ್ಥೆಯ ವಿಸ್ತರಣೆಯೂ ಅಷ್ಟೇ ಮಹತ್ವದ್ದಾಗಿದೆ. 1,000 ಮಾನ್ಯತೆ ಪಡೆದ ಕ್ಲಿನಿಕಲ್ ಟ್ರಯಲ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇದು ಜಾಗತಿಕ ಔಷಧ ಅಭಿವೃದ್ಧಿ ತಾಣವಾಗಿ ಭಾರತದ ಸ್ಥಾನವನ್ನು ಗಣನೀಯವಾಗಿ ಹೆಚ್ಚಿಸುತ್ತದೆ. ಅದರ ವೆಚ್ಚದ ಅನುಕೂಲಗಳು ಮತ್ತು ಹೆಚ್ಚುತ್ತಿರುವ ನುರಿತ ಸಂಶೋಧಕರ ಸಮೂಹದೊಂದಿಗೆ, ಭಾರತವು ದಕ್ಷ ಮತ್ತು ಉತ್ತಮ–ಗುಣಮಟ್ಟದ ಕ್ಲಿನಿಕಲ್ ಪ್ರಯೋಗಗಳಿಗೆ ಸಾಟಿಯಿಲ್ಲದ ಅವಕಾಶಗಳನ್ನು ನೀಡುತ್ತದೆ. ಇದೇ ವೇಳೆ, ನಿಯಂತ್ರಕ ನೀತಿಗಳನ್ನು ಬಲಪಡಿಸುವುದರಿಂದ ಮತ್ತು ಸಾಂಸ್ಥಿಕ ಸಾಮರ್ಥ್ಯಗಳನ್ನು ಹೆಚ್ಚಿಸುವುದರಿಂದ ಭಾರತವನ್ನು ಜಾಗತಿಕ ಮಾನದಂಡಗಳಿಗೆ ಮತ್ತಷ್ಟು ಹತ್ತಿರವಾಗಿಸಬಹುದು. ಜೊತೆಗೆ ಇದು ತ್ವರಿತ ಅನುಮೋದನೆಗಳನ್ನು ಸಾಧ್ಯವಾಗಿಸುತ್ತದೆ ಮತ್ತು




ಜಾಗತಿಕ ಮಧ್ಯಸ್ಥಗಾರರಲ್ಲಿ ವಿಶ್ವಾಸ ಹೆಚ್ಚಿಸುತ್ತದೆ.

ಕಳೆದ ಕೆಲವು ವರ್ಷಗಳಲ್ಲಿ, ಉತ್ಪಾದನೆ ಆಧರಿತ ಪ್ರೋತ್ಸಾಹಧನ ಮತ್ತು 'ಬೃಹತ್ ಔಷಧ ಪಾರ್ಕ್ ಯೋಜನೆ'ಗಳ ಹಿನ್ನೆಲೆಯಲ್ಲಿ 'ಸಕ್ರಿಯ ಔಷಧೀಯ ಪದಾರ್ಥ'ಗಳು (ಎಪಿಐಗಳು) ಮತ್ತು 'ಪ್ರಮುಖ ಆರಂಭಿಕ ಸಾಮಗ್ರಿಗಳ' ದೇಶೀಯ ಉತ್ಪಾದನೆಯಲ್ಲಿ ಭಾರತವು ತ್ವರಿತ ಪ್ರಗತಿ ಸಾಧಿಸಿದೆ. ಇದು ದೇಶದಲ್ಲಿ ಔಷಧಿಗಳ ಬೆಲೆಯನ್ನು ಕಡಿಮೆ ಮಾಡಲು ಸಹಾಯ ಮಾಡಿದ್ದು, ಇದು ವಿಶ್ವದಲ್ಲೇ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಆ ಮೂಲಕ ನಾಗರಿಕರಿಗೆ ಆರೋಗ್ಯ ವೆಚ್ಚ ಅಗ್ಗವಾಗಿಸಲು ಕಾರಣವಾಗಿದೆ.

ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆಯು ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಜೆನೆರಿಕ್ ಔಷಧಿಗಳ ಲಭ್ಯತೆಯನ್ನು ವಿಸ್ತರಿಸಿದೆ, 19,000ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳು ಲಕ್ಷಾಂತರ ಜನರಿಗೆ ಸೇವೆ ಸಲ್ಲಿಸುತ್ತಿವೆ.

ಕ್ಯಾನ್ಸರ್ ಮತ್ತು ಅಪರೂಪದ ರೋಗದ ಔಷಧಗಳಂತಹ ನಿರ್ಣಾಯಕ ಚಿಕಿತ್ಸೆಗಳ ಮೇಲೆ ಆಮದು ಸುಂಕವನ್ನು ಕಡಿತಗೊಳಿಸುವುದು ಸೇರಿದಂತೆ ಪೂರಕ ಕ್ರಮಗಳು ಜೀವ ಉಳಿಸುವ ಚಿಕಿತ್ಸೆಗಳ ಲಭ್ಯತೆಯನ್ನು ಮತ್ತಷ್ಟು ಸುಧಾರಿಸುತ್ತಿವೆ. ಸುಧಾರಿತ ಚಿಕಿತ್ಸೆಗಳು ಹೆಚ್ಚು ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ, ಅವುಗಳ ಕೈಗೆಟುಕುವಿಕೆ ಮತ್ತು ಸಮಾನ ಲಭ್ಯತೆ ಖಾತರಿಪಡಿಸಲು ಕೇಂದ್ರ ಸರ್ಕಾರ ತನ್ನ ನೀತಿಯಲ್ಲಿ ಆದ್ಯತೆ ನೀಡಿದೆ.

ಉದ್ಯಮವು ವಿಕಸನಗೊಳ್ಳುತ್ತಿದ್ದಂತೆ, ಭಾರತವು ಸ್ಥಾಪಿತ ಮಾರುಕಟ್ಟೆಗಳಲ್ಲಿ ಮಾತ್ರವಲ್ಲದೆ ಉದಯೋನ್ಮುಖ ಪ್ರದೇಶಗಳಲ್ಲಿ, ವಿಶೇಷವಾಗಿ ನಾವೀನ್ಯತೆ–ಆಧಾರಿತ ವಿಭಾಗಗಳಲ್ಲಿ ತನ್ನ ಹೆಜ್ಜೆಗುರುತನ್ನು ಆಳಗೊಳಿಸುವ ಗುರಿ ಹೊಂದಿದೆ. ಸುಧಾರಣೆಗಳು ಈ ಪರಿವರ್ತನೆಯ ಕೇಂದ್ರಬಿಂದುವಾಗಿವೆ. ನಿಯಂತ್ರಕ ಸಮನ್ವಯತೆ, ಅನುಮೋದನೆ ಪ್ರಕ್ರಿಯೆಗಳ ಡಿಜಿಟಲೀಕರಣ ಮತ್ತು ತ್ವರಿತ ಅನುಮತಿಗಳ ಕಡೆಗೆ ಸರ್ಕಾರದ ಪ್ರಯತ್ನಗಳು ವ್ಯವಹಾರವನ್ನು ಸುಲಭಗೊಳಿಸುತ್ತಿವೆ. ಗುಣಮಟ್ಟದ ಮಾನದಂಡಗಳು ಮತ್ತು ನಿಯಂತ್ರಕ ಪ್ರಕ್ರಿಯೆಗಳನ್ನು ಬಲಪಡಿಸುವುದರಿಂದ ಭಾರತೀಯ ಔಷಧೀಯ ಉತ್ಪನ್ನಗಳಲ್ಲಿ ಜಾಗತಿಕ ವಿಶ್ವಾಸ ಮುಂದುವರಿಕೆಯನ್ನು ಖಚಿತಪಡಿಸುತ್ತದೆ. ಆದಾಗ್ಯೂ, ಸಂಶೋಧನೆ ಮತ್ತು ಅಭಿವೃದ್ಧಿ ಹೂಡಿಕೆಯನ್ನು ಹೆಚ್ಚಿಸುವುದು ಪ್ರಮುಖ ಸವಾಲಾಗಿದೆ. ಇದನ್ನು ಪರಿಹರಿಸಲು ದೀರ್ಘಕಾಲೀನ ನಾವೀನ್ಯತೆಯನ್ನು ಉಳಿಸಿಕೊಳ್ಳುವುದು ಅಗತ್ಯವಾಗಿದ್ದು, ಇದಕ್ಕೆ ಸಾರ್ವಜನಿಕ–ಖಾಸಗಿ ಸಹಯೋಗದ ಅಗತ್ಯವಿದೆ.

ಮುಂದುವರಿದು ಹೇಳುವುದಾದರೆ, ನೀತಿ ಬೆಂಬಲ, ತಾಂತ್ರಿಕ ಪ್ರಗತಿ ಮತ್ತು ಮಾರುಕಟ್ಟೆ ಅವಕಾಶಗಳ ಸಂಯೋಜನೆಯು ಔಷಧ ಕ್ಷೇತ್ರಕ್ಕೆ ವಿಶಿಷ್ಟ ಬೆಳವಣಿಗೆಯ ಅವಕಾಶ ಒದಗಿಸಿದೆ. ಈಗಾಗಲೇ ರೂ.4 ಲಕ್ಷ ಕೋಟಿ ಮೌಲ್ಯದ ಭಾರತದ ದೇಶೀಯ ಮಾರುಕಟ್ಟೆಯು ಸ್ಥಿರ ವಿಸ್ತರಣೆಗೆ ಸಜ್ಜಾಗಿದೆ. ಮುಂದಿನ ದಶಕದಲ್ಲಿ, ಭಾರತವು ಜೆನೆರಿಕ್ ಔಷಧಗಳಲ್ಲಿ ನಾಯಕನಾಗಿ ಹೊರಹೊಮ್ಮುವುದು ಮಾತ್ರವಲ್ಲದೆ ನವೀನ ಔಷಧಿಗಳು, ಹುದುಗುವಿಕೆ ಆಧಾರಿತ ಉತ್ಪನ್ನಗಳು ಮತ್ತು ಮುಂದಿನ ಪೀಳಿಗೆಯ ಚಿಕಿತ್ಸೆಗಳಲ್ಲಿ ಶಕ್ತಿ ಕೇಂದ್ರವಾಗಿ ಹೊರಹೊಮ್ಮಲು ಉತ್ತಮ ಅವಕಾಶ ಹೊಂದಿದೆ.

ಕೊನೆಯದಾಗಿ ಹೇಳುವುದಾದರೆ, ಭಾರತದ ಔಷಧ ಕ್ಷೇತ್ರವು ನಾವೀನ್ಯತೆ, ಸದೃಢತೆ ಮತ್ತು ಜಾಗತಿಕ ಸ್ಪರ್ಧಾತ್ಮಕತೆಯಿಂದ ವ್ಯಾಖ್ಯಾನಿಸಲಾದ ಹೊಸ ಹಂತವನ್ನು ಪ್ರವೇಶಿಸುತ್ತಿದೆ. 'ಬಯೋಫಾರ್ಮಾ ಶಕ್ತಿ' ಕಾರ್ಯಕ್ರಮ, ಕ್ಲಿನಿಕಲ್ ಮೂಲಸೌಕರ್ಯವನ್ನು ವಿಸ್ತರಿಸುವುದು ಹಾಗೂ ಉದ್ದೇಶಿತ ಉತ್ಪಾದನಾ ಆಧಾರಿತ ಪ್ರೋತ್ಸಾಹ ಧನದಂತಹ ಉಪಕ್ರಮಗಳ ಬೆಂಬಲದೊಂದಿಗೆ, ಭಾರತವು ಪ್ರಮಾಣದಲ್ಲಿ ಜೆನೆರಿಕ್ ಔಷಧ ನಾಯಕನ ಸ್ಥಾನದಿಂದ ಅಧಿಕ ಮೌಲ್ಯದ ಬಯೋಫಾರ್ಮಾ ನಾವೀನ್ಯತೆ ನಾಯಕನ ಸ್ಥಾನಕ್ಕೆ ಪರಿವರ್ತನೆಗೊಳ್ಳುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಲ್ಪನೆಯಂತೆ 'ವಿಕಸಿತ ಭಾರತ–2047'ರ ಅಡಿಯಲ್ಲಿ ಜಾಗತಿಕ ಆರೋಗ್ಯ ರಕ್ಷಣೆಯಲ್ಲಿ ಭಾರತದ ಪಾತ್ರ ಮತ್ತು ವಿಶಾಲ ಗುರಿಗಳನ್ನು ಬಲಪಡಿಸಲು ಈ ರೂಪಾಂತರವು ಕೇಂದ್ರಬಿಂದುವಾಗಿದೆ.

-ಜಗತ್ ಪ್ರಕಾಶ್ ನಡ್ಡಾ
(ಲೇಖಕರು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು)

---


**ಪ್ರಸ್ತುತ ಸಮಾಜದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಅನಾರೋಗ್ಯವನ್ನು ಸೃಷ್ಟಿಸುತ್ತಿರುವ ಜನತೆಗೆ ತಲೆನೋವಾಗಿರುವ 'ಕಸದ ಸಮಸ್ಯೆ'ಯ ಬಗ್ಗೆ ಉತ್ತಮ ಸಂದೇಶಾತ್ಮಕ ಕಥಕ್ -ಸಮಕಾಲೀನ ನೃತ್ಯ ಶೈಲಿಯ ನೃತ್ಯರೂಪಕ "ಗಬ್ಬು ಕಥೆ"ಯನ್ನು ವಿನೋದಾತ್ಮಕವಾಗಿ, ವಿಮರ್ಶಕ ವಿಚಕ್ಷಣ ದೃಷ್ಟಿಯಿಂದ ಜನತೆಗೆ ಉತ್ತಮ ಸಂದೇಶ ಸಾರುವ ಮನರಂಜನಾತ್ಮಕವಾಗಿಯೂ ಇರುವ ಕಥಾರೂಪಕವನ್ನು ಸುಪ್ರಸಿದ್ಧ ಕಥಕ್ ಕಲಾವಿದರು, ಸಂಯೋಜಕರೂ ಆಗಿರುವ ಕೀರ್ತಿಕುಮಾರ್ ಮತ್ತು ತಂಡ ಪ್ರಸ್ತುತಪಡಿಸಲಿದ್ದಾರೆ. ಪರಿಸರ ರಕ್ಷಣೆ, ಶುದ್ಧ ವಾತಾವರಣದ ಮಹತ್ವವನ್ನು ಎಲ್ಲ ಮಕ್ಕಳೂ ಹಾಗೂ ಕುಟುಂಬ ವರ್ಗದವರೂ ಅರಿಯಬೇಕಾದ ಉತ್ತಮ ಪಾಠವನ್ನು ಅರುಹುವ ನೀತಿ ಸಂದೇಶ ಇದರಲ್ಲಿ ಅಡಗಿದೆ.**

# ಮನಮೋಹಕ ಅರ್ಥಪೂರ್ಣ 'ಸಮನ್ವಯ' ಕಲೋತ್ಸವ


ಭಾರತೀಯ ನೃತ್ಯ ಜಗತ್ತಿನಲ್ಲಿ ಭರತನಾಟ್ಯ ಮತ್ತು ಕುಚಿಪುಡಿ ಎರಡೂ ನೃತ್ಯ ಶೈಲಿಗಳ ನೃತ್ಯಪಟು ಡಾ.ವೀಣಾ ಮೂರ್ತಿ ವಿಜಯ್ ಅವರ ಹೆಸರನ್ನು ಕೇಳದವರೇ ಇಲ್ಲ. ವರ್ಷವಿಡಿ ಒಂದಲ್ಲ ಒಂದು ಬಗೆಯ ಚಟುವಟಿಕೆಯಿಂದ ನಾಟ್ಯರಂಗದವರ ಗಮನವನ್ನು ಸೆಳೆದಿರುವ ಇವರು ಅನವರತ ಕ್ರಿಯಾಶೀಲರು ಎಂದರೆ ಅತಿಶಯೋಕ್ತಿಯಲ್ಲ. ಹೊಸತನ, ಪ್ರಯೋಗ ಶೀಲತೆ ಇವರ ಅಸ್ಮಿತೆ. ಸಂಘಟನೆ ಇವರ ಚೇತನ. ಸತತ ಐದು ದಶಕಗಳನ್ನು ಯಶಸ್ವಿಯಾಗಿ ದಾಟಿ ಬಂದಿರುವ ಇವರ ನೇತೃತ್ವದ 'ಶ್ರೀ ರಾಜರಾಜೇಶ್ವರಿ ಕಲಾನಿಕೇತನ್' ನೃತ್ಯ ಸಂಸ್ಥೆಗೆ ಈ ವರ್ಷ ಸುವರ್ಣ ಸಂಭ್ರಮ. ಅಂತರಾಷ್ಟ್ರೀಯ ಮಟ್ಟದಲ್ಲೂ ಸುಪ್ರಸಿದ್ಧ ಕಲಾವಿದೆಯಾಗಿರುವ ವೀಣಾ ಅಪೂರ್ವ ನೃತ್ಯ ಸಂಯೋಜಕಿ– ಬದ್ಧತೆಯ ಗುರು, ಮಾರ್ಗದರ್ಶಿ ಮತ್ತು ಕಲಾ ಪ್ರೋತ್ಸಾಹಕಿ. ಈ ನಿಟ್ಟಿನಲ್ಲಿ ವೀಣಾ, ಕಲಾವಿದರಿಗೆ ವೇದಿಕೆ ಒದಗಿಸಿ ಅವರನ್ನು ಪ್ರೋತ್ಸಾಹಿಸಲು ಅನೇಕಾನೇಕ ನೃತ್ಯೋತ್ಸವ ಗಳನ್ನು ನಡೆಸುತ್ತಾ ಬಂದಿರುವುದು ಸರ್ವರಿಗೂ ವಿದಿತ. ಅವರ ನುರಿತ ಗರಡಿಯಲ್ಲಿ ಸಾವಿರಾರು ಮಂದಿ ಉದಯೋನ್ಮುಖ ಕಲಾವಿದರು ರೂಹುಗೊಂಡು ರಂಗಪ್ರವೇಶ ಮಾಡಿ ಉತ್ತಮ ಕಲಾವಿದೆಯರಾಗಿ ಸಾಧಕ ಹೆಜ್ಜೆಗಳನ್ನು ಇರಿಸುತ್ತಿರುವ ಶ್ರೇಯಸ್ಸು ಇವರ ಅಗ್ಗಳಿಕೆ. ಹಿರಿ–ಕಿರಿಯರೆನ್ನುವ ತಾರತಮ್ಯತೆ ಇಲ್ಲದೆ ಎಲ್ಲರನ್ನೂ ತಮ್ಮೊಟ್ಟಿಗೆ ಕೊಂಡೊಯ್ಯುತ್ತ ಬೆಳೆಸುವುದು ಇವರ ವೈಶಿಷ್ಟ್ಯ. ಅದೇ ಇವರ ಅಸ್ಮಿತೆಯ 'ಸಮನ್ವಯ'ತೆಯ ಗುಣ. ಇದನ್ನು ಎತ್ತಿಹಿಡಿಯುವ ಪ್ರಮುಖೋದ್ದೇಶದಿಂದ ಪ್ರತಿ ವರ್ಷವೂ ತಪ್ಪದೇ ಇವರು ನೆರವೇರಿಸುವ ವಿಶಿಷ್ಟ ಕಾರ್ಯಕ್ರಮವೇ 'ಸಮನ್ವಯ ಕಲಾ ಉತ್ಸವ'. ಸಮಕಾಲೀನ ವಿಷಯ, ವಸ್ತುಗಳನ್ನು ಆಯ್ದುಕೊಂಡು ನೃತ್ಯರೂಪಕಗಳನ್ನು, ವಿನೂತನ ನೃತ್ಯಪ್ರಯೋಗಗಳನ್ನು ಸಮನ್ವಯದ ಶೀರ್ಷಿಕೆಯಡಿ ಆಯೋಜಿಸುತ್ತ ಬಂದಿದ್ದು, ಅದರಂತೆ ಈ ಹೊಸವರ್ಷದಲ್ಲಿ ಸಮನ್ವಯ ಕಲಾ ಉತ್ಸವವನ್ನು ಇದೇ ತಿಂಗಳ 18 ಶನಿವಾರ ಸಂಜೆ 5 ಗಂಟೆಗೆ ಮಲ್ಲೇಶ್ವರದ ಸೇವಾಸದನದಲ್ಲಿ ವಿಭಿನ್ನ ಆಯಾಮದಲ್ಲಿ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುತ್ತಿದ್ದಾರೆ.



ಪ್ರಸ್ತುತ ಸಮಾಜದ ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವ ಅನಾರೋಗ್ಯವನ್ನು ಸೃಷ್ಟಿಸುತ್ತಿರುವ ಜನತೆಗೆ ತಲೆನೋವಾಗಿರುವ 'ಕಸದ ಸಮಸ್ಯೆ'ಯ ಬಗ್ಗೆ ಉತ್ತಮ ಸಂದೇಶಾತ್ಮಕ ಕಥಕ್ –ಸಮಕಾಲೀನ ನೃತ್ಯ ಶೈಲಿಯ ನೃತ್ಯರೂಪಕ "ಗಬ್ಬು ಕಥೆ"ಯನ್ನು ವಿನೋದಾತ್ಮಕವಾಗಿ, ವಿಮರ್ಶಕ ವಿಚಕ್ಷಣ ದೃಷ್ಟಿಯಿಂದ ಜನತೆಗೆ ಉತ್ತಮ ಸಂದೇಶ ಸಾರುವ ಮನರಂಜನಾತ್ಮಕವಾಗಿಯೂ ಇರುವ ಕಥಾರೂಪಕವನ್ನು ಸುಪ್ರಸಿದ್ಧ ಕಥಕ್ ಕಲಾವಿದರು, ಸಂಯೋಜಕರೂ ಆಗಿರುವ ಕೀರ್ತಿಕುಮಾರ್ ಮತ್ತು ತಂಡ ಪ್ರಸ್ತುತಪಡಿಸಲಿದ್ದಾರೆ. ಪರಿಸರ ರಕ್ಷಣೆ, ಶುದ್ಧ ವಾತಾವರಣದ ಮಹತ್ವವನ್ನು ಎಲ್ಲ ಮಕ್ಕಳೂ ಹಾಗೂ ಕುಟುಂಬ ವರ್ಗದವರೂ ಅರಿಯಬೇಕಾದ ಉತ್ತಮ ಪಾಠವನ್ನು ಅರುಹುವ ನೀತಿ ಸಂದೇಶ ಇದರಲ್ಲಿ ಅಡಗಿದೆ.



ನಂತರ– ಉತ್ತಮ ಪುರುಷನರ್ತಕರಾಗಿ ಗಮನ ಸೆಳೆದಿರುವ ನೃತ್ಯಕಲಾವಿದ ಶ್ರೀ ಸೂರ್ಯ ಎನ್ ರಾವ್ ಅವರು ಪರಿಕಲ್ಪಿಸಿ ಸಂಯೋಜಿಸಿರುವ ವಿಶಿಷ್ಟ ರಾವಣ ವ್ಯಕ್ತಿತ್ವದ ಬಗ್ಗೆ ನೂತನ ಆಯಾಮವನ್ನು ತೆರೆದಿಡುವ ಕುತೂಹಲ ಭರಿತವಾದ ಅಂಶಗಳ ಸುತ ಪರಿಭ್ರಮಿಸುವ 'ರಾವಣ' ಏಕವ್ಯಕ್ತಿ ನೃತ್ಯರೂಪಕವನ್ನು ಅನಾವರಣಗೊಳಿಸಲಿದ್ದಾರೆ. ಜನಜನಿತವಾಗಿ ಲೋಕ ಭಾವಿಸಿರುವಂತೆ ಅವನು ದುಷ್ಟ, ಖಳನಾಯಕನಲ್ಲ. ಬದಲಾಗಿ ಅವನಂಥ ಮಹಾ ಶಿವಭಕ್ತನಿಲ್ಲ. ಅಪರಿಮಿತ ಪೌರುಷವನ್ನುಳ್ಳ ಮೇಧಾವಿ, ಮಹಾನ್ ವೈಣಿಕ– ವಿದ್ವಾಂಸ, ತ್ರಿಕಾಲ ಜ್ಞಾನಿಯಾದ ರಾವಣನ ಶಕ್ತಿ– ಸಾಮರ್ಥ್ಯ– ಔದಾರ್ಯದ ವಿವಿಧ ಮುಖಗಳನ್ನು ಪರಿಚಯಿಸುವ ವಿಶಿಷ್ಟ ಪ್ರಯತ್ನ ಇದಾಗಿದೆ.



ಕಣ್ಮನ ರಂಜಿಸುವ ಕಾರ್ಯಕ್ರಮದ ಭಾಗವಾಗಿ ಇದರೊಡನೆ ಮನಸ್ಸನ್ನು ಅರಳಿಸುವ ಸುಮನೋಹರ ಭರತನಾಟ್ಯ ರಂಜನೆಯೂ ಇದೆ. ಈಗಾಗಲೇ ಉತ್ತಮ ಭರತನಾಟ್ಯ ಕಲಾವಿದೆಯರಾಗಿ ಗುರುತಿಸಿಕೊಂಡಿರುವ ಶ್ರೀಮತಿ ಜಯಶೀಲ ವಿನೋದ್ ಮತ್ತು ರವಳೀ ನಾಗೇಶ್ವರ ಅವರು ಹಲವಾರು ಮನಸೆಳೆವ ಕೃತಿಗಳನ್ನು ಸೊಗಸಾಗಿ ಅಭಿನಯಿಸಿ, ಸುಮನೋಹರವಾಗಿ ನರ್ತಿಸಲಿದ್ದಾರೆ.

ಜನಮಾನಸವನ್ನು ಆಕರ್ಷಿಸುವ ಈ ಕಾರ್ಯಕ್ರಮಗಳ ಆಯೋಜಕರು ಡಾ. ವೀಣಾ ಮೂರ್ತಿ ವಿಜಯ್, ಇದರ ಹಿನ್ನಲೆಯಲ್ಲಿ ಅವರ ಅಪಾರ ಪರಿಶ್ರಮವನ್ನು ಗುರುತಿಸಬಹುದು. ಕಾಲಕಾಲಕ್ಕೆ ನಗರದ ಕಲಾರಸಿಕರಿಗೆ ನೃತ್ಯಧಾರೆಯ ಸವಿಯನ್ನು ಬದ್ಧತೆಯಿಂದ ಉಣಬಡಿಸುತ್ತಿರುವುದು ಅವರ ಕಲಾ ಪ್ರೀತಿಯ ದ್ಯೋತಕ. ಮನ ತಣಿಸುವ ಈ ಸುಂದರ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಕಲಾರಸಿಕರೆಲ್ಲರಿಗೂ ಆದರದ ಸುಸ್ವಾಗತ.

-ವೈ.ಕೆ.ಸಂಧ್ಯಾಶರ್ಮ

# ತಿರುಪತಿ ದರ್ಶನದಲ್ಲಿ ಭಾರೀ ಬದಲಾವಣೆ



ಎಐ ಚಿತ್ರ

ತಿರುಮಲ

ಬೇಸಿಗೆ ರಜೆಯ ಹಿನ್ನೆಲೆಯಲ್ಲಿ ಶ್ರೀವಾರಿ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದ್ದು, ಸಾಮಾನ್ಯ ಭಕ್ತರಿಗೆ ಹೆಚ್ಚಿನ ಆದ್ಯತೆ ನೀಡಲು ತಿರುಮಲ ತಿರುಪತಿ ದೇವಸ್ಥಾನಂ ಮಹತ್ವದ ನಿರ್ಧಾರ ಕೈಗೊಳ್ಳಲು ಮುಂದಾಗಿದೆ. ಶಾಲಾ-ಕಾಲೇಜುಗಳಿಗೆ ರಜೆ ಇರುವುದರಿಂದ ಪೋಷಕರು ಮಕ್ಕಳೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು, ಜನದಟ್ಟಣೆಯನ್ನು ನಿಯಂತ್ರಿಸಲು ದರ್ಶನ ನೀತಿಯಲ್ಲಿ ಬದಲಾವಣೆ ತರಲಾಗುತ್ತಿದೆ.

ಪ್ರಸ್ತುತ ಜಾರಿಯಲ್ಲಿರುವ ಸ್ಲಾಟೆಡ್ ಸರ್ವ ದರ್ಶನ ಟೋಕನ್‌ಗಳ ಮೂಲಕ ದರ್ಶನ ಪಡೆಯಲು ಭಕ್ತರು ಸುಮಾರು 23 ಗಂಟೆಗಳ ಕಾಲ ಕಾಯಬೇಕಾದ ಪರಿಸ್ಥಿತಿ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು, ಮೇ 1 ರಿಂದ ಎಸ್‌ಎಸ್‌ಡಿ ಟೋಕನ್‌ಗಳು ಹಾಗೂ ವಿಐಪಿ ಬ್ರೇಕ್ ದರ್ಶನಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲು ಟಿಟಿಡಿ ಯೋಜಿಸುತ್ತಿದೆ. ಇದರಿಂದಾಗಿ ಸಾಮಾನ್ಯ ಭಕ್ತರು 8 ರಿಂದ 12 ಗಂಟೆಗಳ ಒಳಗೆ ದರ್ಶನ ಪಡೆಯಲು ಸಾಧ್ಯವಾಗಲಿದೆ.

ಸಾಮಾನ್ಯವಾಗಿ ಪ್ರತಿದಿನ ವಿಐಪಿ ಬ್ರೇಕ್ ದರ್ಶನಗಳಿಗಾಗಿಯೇ 2 ರಿಂದ 3 ಗಂಟೆಗಳ ಸಮಯ ವ್ಯಯವಾಗುತ್ತಿದೆ.

ಒಂದು ವೇಳೆ ಈ ವಿಐಪಿ ದರ್ಶನಗಳನ್ನು ರದ್ದುಗೊಳಿಸಿದರೆ, ಆ ಸಮಯದಲ್ಲಿ ಹೆಚ್ಚುವರಿಯಾಗಿ 15 ಸಾವಿರ ಸಾಮಾನ್ಯ ಭಕ್ತರಿಗೆ ದರ್ಶನ ಭಾಗ್ಯ ಕಲ್ಪಿಸಬಹುದು ಎಂಬುದು ಅಧಿಕಾರಿಗಳ ಲೆಕ್ಕಾಚಾರ. ವೈಕುಂಠ ಏಕಾದಶಿಯ ಸಂದರ್ಭದಲ್ಲಿ ಅನುಸರಿಸುವ 'ಏಕ ಮಾದರಿ ದರ್ಶನ' ವ್ಯವಸ್ಥೆಯನ್ನು ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಜಾರಿಗೆ ತರಲು ಸಿದ್ಧತೆ ನಡೆಸಲಾಗುತ್ತಿದೆ.

ಕಳೆದ ಮೂರು ವರ್ಷಗಳ ಅಂಕಿಅಂಶಗಳ ಪ್ರಕಾರ, ಬೇಸಿಗೆಯ ಪ್ರತಿ ತಿಂಗಳು ಸುಮಾರು 23 ಲಕ್ಷ ಭಕ್ತರು ತಿರುಮಲಕ್ಕೆ ಭೇಟಿ ನೀಡುತ್ತಾರೆ. ಈ ಭಾರೀ ದಟ್ಟಣೆಯನ್ನು ನಿರ್ವಹಿಸಲು ಟಿಟಿಡಿ ಈ ಕೆಳಗಿನ ಕ್ರಮಗಳನ್ನು ಪರಿಗಣಿಸುತ್ತಿದೆ. ವಿವಿಧ ವರ್ಗದ ದರ್ಶನಗಳನ್ನು ಬದಿಗಿಟ್ಟು ಎಲ್ಲರಿಗೂ ಒಂದೇ ಮಾದರಿಯ ದರ್ಶನ ವ್ಯವಸ್ಥೆ ಕಲ್ಪಿಸುವುದು. ವಿಐಪಿ ಪ್ರೋಟೋಕಾಲ್ ದರ್ಶನಗಳನ್ನು ಕಡಿತಗೊಳಿಸುವ ಮೂಲಕ ದರ್ಶನದ ವೇಗವನ್ನು ಹೆಚ್ಚಿಸುವುದು. ಹೊಸ ನೀತಿಯಿಂದ ದಿನಕ್ಕೆ ಸರಿಸುಮಾರು 80 ಸಾವಿರ ಜನರಿಗೆ ಸುಲಭವಾಗಿ ದರ್ಶನ ಒದಗಿಸಬಹುದು ಎಂದು ಅಂದಾಜಿಸಲಾಗಿದೆ.

ತಿರುಮಲದಲ್ಲಿ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತು ಸುಸ್ತಾಗುವ ಸಾಮಾನ್ಯ ಭಕ್ತರಿಗೆ ನೆಮ್ಮದಿ ನೀಡಲು ಟಿಟಿಡಿ ಈ ಕ್ರಾಂತಿಕಾರಿ ಹೆಜ್ಜೆ ಇಡುತ್ತಿದೆ. ಬೇಸಿಗೆಯಲ್ಲಿ ತಿರುಪತಿಗೆ ಹೋಗುವ ಪ್ಲಾನ್ ಇದ್ದರೆ, ಹೊರಡುವ ಮುನ್ನ ಟಿಟಿಡಿಯ ಅಧಿಕೃತ ಪ್ರಕಟಣೆಗಳನ್ನು ಗಮನಿಸುವುದು ಸೂಕ್ತ.

## ಮಾನವ ಹಕ್ಕುಗಳ ನಿಜವಾದ ಪ್ರತಿಪಾದಕರು: ಪ್ರೊ.ರವಿ



ಕೋಲಾರ

ಶಿಕ್ಷಣ ಚಳುವಳಿ ಸಂಘಟನೆ ಮತ್ತು ಮಾನವ ಹಕ್ಕುಗಳ ನಿಜವಾದ ಪ್ರತಿಪಾದಕರಾಗಿದ್ದ, ಅಂಬೇಡ್ಕರ್ ಅವರು ತಾವು ರಚಿಸಿದ ಸಂವಿಧಾನದಲ್ಲಿ ದೇಶದ ನಾಗರೀಕರಿಗೆ ಎಲ್ಲಾ ರೀತಿಯ ಸಮಾನ ಹಕ್ಕುಗಳನ್ನು ನೀಡಿದರು ಎಂದು ಬೆಂಗಳೂರು ಉತ್ತರ ವಿವಿ ಕುಲಪತಿ ಪ್ರೊ.ಬಿ.ಕೆ.ರವಿ ತಿಳಿಸಿದರು.

ವಿವಿಯ ಟಮಕದ ಆಡಳಿತ ಕಚೇರಿಯಲ್ಲಿ ಅಂಬೇಡ್ಕರ್ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಕಾನೂನಿನ ಮುಂದೆ ಎಲ್ಲಾರೂ ಸಮಾನಾರು ಎಂಬ ರೀತಿಯಲ್ಲಿ ಸಂವಿಧಾನವನ್ನು ವಿನ್ಯಾಸಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಡಾ॥ ಅಂಬೇಡ್ಕರ್ ಅವರು ಹುಟ್ಟಿದ ದೇಶದಲ್ಲೇ ನಾವೆಲ್ಲರೂ ಜನಿಸಿರುವುದು. ಸಮ ಸಮಾಜ ನಿರ್ಮಾಣ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಸಂವಿಧಾನವನ್ನು ಈ ದೇಶಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸುವ ನಾವು ನೀವೆಲ್ಲರೂ ಸಮ ಸಮಾಜದ ನಿರ್ಮಾಣಕ್ಕಾಗಿ ಮತ್ತು ಅದರ ರಕ್ಷಣೆಗಾಗಿ ಪಣತೊಡೋಣ ಎಂದರು.

ಶಿಕ್ಷಣ ಚಳುವಳಿ ಸಂಘಟನೆ ಮತ್ತು ಮಾನವ ಹಕ್ಕುಗಳ ನಿಜವಾದ ಪ್ರತಿಪಾದಕರಾಗಿದ್ದ, ಅಂಬೇಡ್ಕರ್ ಅವರು ತಾವು ರಚಿಸಿದ ಸಂವಿಧಾನದಲ್ಲಿ ದೇಶದ ನಾಗರೀಕರಿಗೆ ಎಲ್ಲಾ ರೀತಿಯ ಸಮಾನ ಹಕ್ಕುಗಳನ್ನು ನೀಡಿದರು ಎಂದು ತಿಳಿಸಿದರು.

ಅಂಬೇಡ್ಕರ್ ಅವರ ಬದುಕು ಎಲ್ಲರಿಗೂ ಸ್ಫೂರ್ತಿ ನೀಡುವಂಥದ್ದು. ಸಮಾನತೆ, ಪ್ರಗತಿಯ ಕನಸು ಕಂಡ ಮೇರು ನಾಯಕ ನಮ್ಮ ಹೆಮ್ಮೆಯ ಸಂವಿಧಾನ ಶಿಲ್ಪಿಯಾಗಿದ್ದು, ಅವರ ತತ್ವಾದರ್ಶ ಮೈಗೂಡಿಸಿಕೊಂಡು ದೇಶವನ್ನು ಪ್ರಗತಿಯತ್ತ ಮುನ್ನಡೆಸೋಣ ಎಂದರು.

ಈ ಸಂದರ್ಭದಲ್ಲಿ ವಿವಿಯ ವಿತ್ತಾಧಿಕಾರಿ ವಸಂತಕುಮಾರ್, ಸಿಂಡಿಕೇಟ್ ಸದಸ್ಯ ಗೋಪಾಲಗೌಡ, ಅಕಾಡೆಮಿಕ್ ಸದಸ್ಯ ರಾಮಚಂದ್ರ ಸೇರಿದಂತೆ ವಿವಿಯ ಅಧಿಕಾರಿಗಳು ಸಿಬ್ಬಂದಿ ಹಾಜರಿದ್ದರು.

## ಭೂ ಮಾಪನ ಕಾರ್ಯ ಸ್ಥಗಿತ ರೈತರ ಆಕ್ರೋಶ



ದೊಡ್ಡಬಳ್ಳಾಪುರ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸರ್ಕಾರದ ಪರವಾನಗಿ ಭೂ ಮಾಪಕರು ಎರಡು ತಿಂಗಳಿಂದ ಮುಷ್ಕರ ಹೂಡಿರುವುದರಿಂದ ಭೂ ಮಾಪನ ಇಲಾಖೆಯ ಎಲ್ಲ ಕೆಲಸಗಳು ಸ್ಥಗಿತಗೊಂಡಿದೆ. ಇದರಿಂದಾಗಿ ಭೂ ಮಾಪನ ಕಚೇರಿ ಸ್ತಬ್ಧವಾಗಿದೆ. ಭೂ ಸರ್ವೆ, ಹದ್ದುಬಸ್ತ್, ಪೋಡಿ ಸೇರಿದಂತೆ ಇತರೆ ಕೆಲಸಗಳಿಗೆ ಸಲ್ಲಿಕೆಯಾಗಿರುವ ಎರಡು ಸಾವಿರಕ್ಕೂ ಹೆಚ್ಚು ಅರ್ಜಿಗಳು ವಿಲೇ ಆಗದೇ ಉಳಿದಿವೆ ಎಂದು ಕೆಸ್ತೂರು ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷ ರಮೇಶ್ ಗೌಡ ಆಕ್ರೋಶ ವ್ಯಕ್ತಪಡಿಸಿದರು.

ನಗರದ ತಾಲ್ಲೂಕು ಕಚೇರಿಯ ಆವರಣದಲ್ಲಿರುವ ಸೋಮವಾರ ಭೂ ಮಾಪನ ಇಲಾಖೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ ಅವರು ಮಾತನಾಡಿದರು. ರೈತರ ಜಮೀನು ಮಾರಾಟ, ಹಕ್ಕು ಬದಲಾವಣೆ ಎಲ್ಲ ಕೆಲಸಗಳಿಗೂ ತೊಡಕು ಉಂಟಾಗಿದೆ. ಸರ್ಕಾರ ಕೂಡಲೇ ಭೂ ಮಾಪಕರ ಬೇಡಿಕೆ ಈಡೇರಿಸಿ ಅವರನ್ನು ಕೆಲಸಕ್ಕೆ ನಿಯೋಜಿಸಬೇಕು, ಇಲ್ಲವೇ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.

ಎರಡು ತಿಂಗಳಿಂದ ಭೂ ಮಾಪನ ಇಲಾಖೆಯಲ್ಲಿ ಜಮೀನು ಸರ್ವೆ, ಹದ್ದು ಬಸ್ತ್ , 11ಇ, ಪೋಡಿ, ದಾರಿ ನಕ್ಷೆಯ ಅರ್ಜಿಗಳು ಅರ್ಜಿ ವಿಲೇವಾರಿಯಾಗುತ್ತಿಲ್ಲ. ರೈತರ ಪಾಲಿಗೆ ಈ ಇಲಾಖೆ ಸತ್ತು ಹೋಗಿದೆ. ರೈತರ ಸಮಸ್ಯೆ ಯಾರೂ ಆಲಿಸುತ್ತಿಲ್ಲ. ಸರ್ವೆ ಇಲಾಖೆಯ ಈ ಸಮಸ್ಯೆಯಿಂದ ಜಮೀನುಗಳ ಮಾರಾಟ ಪ್ರಕ್ರಿಯೆ ನಡೆಯುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ 2000 ಸಾವಿರಕ್ಕೂ ಅಧಿಕ ಅರ್ಜಿಗಳ ವಿಲೇವಾರಿಯಾಗಬೇಕಿದೆ. ರೈತರು ತಮ್ಮ ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆ ವೆಚ್ಚ, ಮದುವೆ ಕಾರ್ಯಗಳಿಗೆ ಹಣ ಹೊಂದಿಸುವುದು ಕಷ್ಟವಾಗಿದೆ. ಸರ್ಕಾರ ಕೂಡಲೇ ಭೂ ಮಾಪಕರ ಬೇಡಿಕೆ ಈಡೇರಿಸಿ ಭೂ ಸರ್ವೆ ಕಾರ್ಯಗಳನ್ನು ಮಾಡಿಸಬೇಕು ಎಂದು ರಮೇಶ್ ಗೌಡ ಒತ್ತಾಯಿಸಿದರು.

ಪ್ರತಿಭಟನೆ ಯಲ್ಲಿ ನಾಗರಾಜ್, ಶಶಿ ಕುಮಾರ್, ಉಮೇಶ್, ಶಿವಕುಮಾರ್ ಭಾಗವಹಿಸಿದ್ದರು.



ಸಚಿವ ಜಮೀರ್ ಅಹಮದ್ ಖಾನ್ ಅವರು ಚಾಮರಾಜಪೇಟೆ ಚೆಲುವಾದಿಪಾಳ್ಯದಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಗೋವಿಂದರಾಜ್ ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

## ಶ್ರೇಷ್ಠ ಸಂವಿಧಾನ ರೂಪಿಸಿದ ಮಹಾನ್ ನಾಯಕ ಅಂಬೇಡ್ಕರ್



ದೊಡ್ಡಬಳ್ಳಾಪುರ

ಡಾ. ಬಿ.ಆರ್. ಅಂಬೇಡ್ಕರ್ ಅವರು ಕೇವಲ ಶೋಷಿತ ಸಮುದಾಯದ ನಾಯಕನಲ್ಲ, ದೇಶಕ್ಕೆ ವಿಶ್ವದ ಶ್ರೇಷ್ಠ ಸಂವಿಧಾನವನ್ನು ನೀಡಿದ ಮಹಾನ್ ನಾಯಕ ಎಂದು ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಹೇಳಿದರು.

ತೂಬಗೆರೆಯ ಅಂಬೇಡ್ಕರ್ ಯುವಕ ಸಂಘದ ವತಿಯಿಂದ ಆಯೋಜಿಸಲಾದ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಶೋಷಿತರು ಹಾಗೂ ಹಿಂದುಳಿದ ವರ್ಗಗಳನ್ನು ಸಮಾಜದ ಮುಖ್ಯವಾಹಿನಿಗೆ ತಂದು, ಸಮಾನ ಅವಕಾಶಗಳನ್ನು ಕಲ್ಪಿಸುವ ದೃಢಸಂಕಲ್ಪ ಅಂಬೇಡ್ಕರ್ ಅವರದ್ದಾಗಿತ್ತು. ಸಾಮಾಜಿಕ ನ್ಯಾಯ, ಸಮಾನತೆ, ಶಿಕ್ಷಣ ವಿಸ್ತರಣೆ ಹಾಗೂ ಅಸ್ಪೃಶ್ಯತೆ ನಿರ್ಮೂಲನೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅವರ ಕೊಡುಗೆ ಅಪಾರವಾಗಿದೆ' ಎಂದು ಅವರು ತಿಳಿಸಿದರು.

ಯುವ ಮುಖಂಡ ಉದಯ ಆರಾಧ್ಯ ಮಾತನಾಡಿ ಹನ್ನೆರಡನೇ ಶತಮಾನದಲ್ಲಿ ಜಗಜ್ಯೋತಿ ಬಸವಣ್ಣ, ಅಲ್ಲಮಪ್ರಭು ಅವರ ಮುಂದಾಳತ್ವದಲ್ಲಿ ಸಮಾಜದ ಜಾತೀಯತೆ, ಅಸಮಾನತೆ, ಲಿಂಗ ತಾರತಮ್ಯ ಹೋಗಲಾಡಿಸಲು ಶ್ರಮಿಸಿದರಾದರು ಅದೂ ಪೂರ್ಣ ಪ್ರಮಾಣದಲ್ಲಿ ಹೋಗಲಾಡಿಸಲು ಸಾಧ್ಯವಾಗಿರಲಿಲ್ಲ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಇದನ್ನೆಲ್ಲವನ್ನು ಹೋಗಲಾಡಿಸಲು ಪ್ರಯತ್ನ ಪಟ್ಟರು. ದೇಶದ ಪ್ರತಿ ಪ್ರಜೆ ಗೌರವ ಮತ್ತು ಸ್ವಾಭಿಮಾನದಿಂದ ಬದುಕಬೇಕು. ಸಮ ಸಮಾಜ ನಿರ್ಮಾಣಮಾಡಬೇಕು ಎಂಬುದು ಅವರ ಮಹಾದಾಸೆಯಾಗಿತ್ತು ಎಂದರು.

ಕಾರ್ಯಕ್ರಮದ ಅಂಗವಾಗಿ ಬಸ್ ನಿಲ್ದಾಣದಲ್ಲಿ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾವ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ, ಸಿಹಿ ಹಂಚುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಪ್ರಬುದ್ಧ ಕರ್ನಾಟಕ ಭೀಮಸೇನೆ ರಾಜ್ಯಾಧ್ಯಕ್ಷ ಮುನಿರಾಜು, ಗೌರವಾಧ್ಯಕ್ಷ ತೂಬಗೆರೆ ನಾಗರಾಜು, ಕೆಪಿಸಿಸಿ ಸದಸ್ಯ ಎಸ್.ಆರ್. ಮುನಿರಾಜು, ತಾಲ್ಲೂಕು ಸೊಸೈಟಿ ನಿರ್ದೇಶಕ ಪುರುಷೋತ್ತಮ್, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗರಾಜು, ಮುಖಂಡರಾದ ಗೌರೀಶ್, ಅಶೋಕ್, ಮುರುಳಿ, ಯುವ ಮುಖಂಡ ಉದಯ ಆರಾಧ್ಯ ಹಾಗೂ ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳಾದ ಗಿರಿಯಪ್ಪ, ಮುನಿರಾಜು, ಮೂರ್ತಿ, ಚಂದ್ರು, ಸುರೇಶ್ ಪ್ರಭು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಬಂಗಾರ, ಬೆಳ್ಳಿ ನಗದು ದೋಚಿ ಪರಾರಿ



ಚಿಂತಾಮಣಿ

ನಗರದ ಕನ್ನಂಪಲ್ಲಿ ಪ್ರದೇಶದಲ್ಲಿ ಖತರ್ನಾಕ್ ಕಳ್ಳರು ಮನೆಗೆ ಕನ್ನ ಹಾಕಿ ಸುಮಾರು ರೂ.10.80 ಲಕ್ಷ ಮೌಲ್ಯದ ಬಂಗಾರ, ಬೆಳ್ಳಿ ಮತ್ತು ನಗದು ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ.

ಹಳೆ ಆರ್‌ಟಿಒ ಕಚೇರಿ ಹಿಂಭಾಗದಲ್ಲಿರುವ ರಾಮಕೃಷ್ಣಯ್ಯ ಅವರ ಮನೆಯಲ್ಲಿ ವಾಸವಾಗಿರುವ ಪಶುವೈದ್ಯಾಧಿಕಾರಿ ಡಾ ಮನೋಜ್ ವಿ ಅವರ ಮನೆಯನ್ನು ಗುರಿಯಾಗಿಸಿಕೊಂಡು ಕಳ್ಳರು ಬೀಗ ಮುರಿದು ಒಳನುಗ್ಗಿದ್ದಾರೆ.

ಕಳ್ಳರು ಸುಮಾರು 35 ಗ್ರಾಂ ಬಂಗಾರದ ನೆಕ್ಲೆಸ್, 58 ಗ್ರಾಂ ಬಂಗಾರದ ಹಾರ, 42 ಗ್ರಾಂ ತೂಕದ 8 ಜೋಡಿ ಕಿವಿಯೋಲೆಗಳು, 2 ಗ್ರಾಂ ಉಂಗುರ ಸೇರಿದಂತೆ ಒಟ್ಟು 137 ಗ್ರಾಂ ಬಂಗಾರದ ಆಭರಣಗಳು (ಸುಮಾರು ರೂ.10 ಲಕ್ಷ ಮೌಲ್ಯ), 750 ಗ್ರಾಂ ಬೆಳ್ಳಿ ಆಭರಣಗಳು (ಸುಮಾರು ರೂ.60 ಸಾವಿರ ಮೌಲ್ಯ) ಹಾಗೂ ರೂ.20 ಸಾವಿರ ನಗದು ಹಣವನ್ನು ದೋಚಿ ಪರಾರಿಯಾಗಿದ್ದಾರೆ.

ಘಟನೆ ತಿಳಿದ ತಕ್ಷಣ ಮನೆ ಮಾಲೀಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಘಟನಾ ಸ್ಥಳಕ್ಕೆ ಡಿವೈಎಸ್ಪಿ ಪಿ ಮುರಳೀಧರ್, ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಶಿವರಾಜ್ ಎಸ್, ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಕುರಿತು ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಳ್ಳರ ಪತ್ತೆಗೆ ಪೊಲೀಸರು ಶೋಧ ಕಾರ್ಯ ತೀವ್ರಗೊಳಿಸಿದ್ದಾರೆ.

## 'ಅಂಬೇಡ್ಕರ್ ತತ್ವಗಳನ್ನು ಅಳವಡಿಸಿಕೊಳ್ಳಿ'



ಬಂಗಾರಪೇಟೆ

ನಗರದ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಬಿಜೆಪಿ ವತಿಯಿಂದ ಬಿ ಆರ್ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಈ ವೇಳೆ ಮಾಜಿ ಶಾಸಕ ಬಿ ಪಿ ವೆಂಕಟಮುನಿಯಪ್ಪ ಮಾತನಾಡಿ, ಅಂಬೇಡ್ಕರ್ ವಿಶ್ವಮಾನವರಾಗಿದ್ದು, ಶಿಕ್ಷಣ, ಸಾಮಾಜಿಕ ನ್ಯಾಯ ಮತ್ತು ಸಮಾನತೆಗೆ ಹೆಚ್ಚು ಒತ್ತು ನೀಡಿದ ಮಹಾನ್ ಚೇತನ ಎಂದು ಬಣ್ಣಿಸಿದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ ವಿ ಮಹೇಶ್ ಮಾತನಾಡಿ, ಸರ್ವಜನಾಂಗಕ್ಕೂ ಸಂವಿಧಾನ ನೀಡಿದ ಮಹಾನ್ ನಾಯಕ ಅಂಬೇಡ್ಕರ್ ಅವರ ತತ್ವಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಯುವ ಪೀಳಿಗೆ ಅವರ ಜೀವನಚರಿತ್ರೆಯನ್ನು ಓದಿ ತಿಳಿದುಕೊಳ್ಳಬೇಕು ಎಂದು ಕರೆ ನೀಡಿದರು.

ಅಂಬೇಡ್ಕರ್ ಯಾವುದೇ ಒಂದು ಜಾತಿ ಅಥವಾ ವರ್ಗಕ್ಕೆ ಸೀಮಿತವಾಗಿರದೆ, ಇಡೀ ವಿಶ್ವವೇ ಗೌರವಿಸುವ ಮಹಾನಾಯಕರು. ಅವರು ರಚಿಸಿದ ಭಾರತದ ಲಿಖಿತ ಸಂವಿಧಾನ ವಿಶ್ವದಲ್ಲೇ ಅತ್ಯುತ್ತಮವಾದದ್ದು ಎಂದು ವಿವರಿಸಲಾಯಿತು.

ಕಾರ್ಯಕ್ರಮದಲ್ಲಿ ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಮುಖಂಡರಾದ ಕಾರಹಳ್ಳಿ ಪ್ರತಾಪ್, ಯುವಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಶಿವಕುಮಾರ್, ನಗರ ಅಧ್ಯಕ್ಷ ಬಿ.ಪಿ ಮಹೇಶ್, ಮಾಜಿ ಅಧ್ಯಕ್ಷ ಶಶಿಕುಮಾರ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.



ವಿಜಯಪುರ ಪಟ್ಟಣದ ಬಸ್ ನಿಲ್ದಾಣದಲ್ಲಿ, ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ರಕ್ಷಣಾ ಸಮಿತಿಯ ವತಿಯಿಂದ ಅಂಬೇಡ್ಕರ್ ಜಯಂತಿ ಅಂಗವಾಗಿ, ಅವರ ಪ್ರತಿಮೆಗೆ ಪೂಜೆ ಸಲ್ಲಿಸಿ, ಮಾಲಾರ್ಪಣೆ ಮಾಡಲಾಯಿತು. ಪುರಸಭೆ ಅಧ್ಯಕ್ಷೆ ಎಸ್.ಭವ್ಯಾಮಹೇಶ್, ಸದಸ್ಯ ವಿ.ನಂದಕುಮಾರ್, ಮುಖಂಡರಾದ ಕೆ.ಎಂ.ಮಧುಮಹೇಶ್, ಮಹಬೂಬ್ ಪಾಷ, ಭಾನುಚಂದ್ರ, ಮಹಬೂಬ್ ಪಾಷ, ಸಿ.ರಾಘವ, ಸೈಫುಲ್ಲಾ, ಐ.ಬಿ.ದೇವರಾಜ್, ಸೇರಿದಂತೆ ಮುಖಂಡರು ಹಾಜರಿದ್ದರು.

## ಸಾಮಾಜಿಕ ನ್ಯಾಯ ರಕ್ಷಣೆಗೆ ಸಂವಿಧಾನವೇ ಅಸ್ತ್ರ–ಸಿದ್ದೇಶ್ವರಿ



ಕೋಲಾರ

ದೇಶದಲ್ಲಿನ ಅಸಮಾನತೆ,ಶೋಷಣೆ ತೊಡೆದು ಹಾಕುವಲ್ಲಿ ಹಾಗೂ ಸಾಮಾಜಿಕ ನ್ಯಾಯ ಸಿಗಲು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಪ್ರಮುಖ ಅಸ್ತ್ರವಾಗಿದೆ ಎಂದು ತಾಲ್ಲೂಕಿನ ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆ ಪ್ರಭಾರ ಮುಖ್ಯ ಶಿಕ್ಷಕಿ ಸಿದ್ದೇಶ್ವರಿ ಅಭಿಪ್ರಾಯಪಟ್ಟರು.

ಮಂಗಳವಾರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಬಡತನದಲ್ಲಿ ಬಂದರೂ ಸಾಧನೆಯ ಶಿಖರವೇರಿದ ಅವರ ಆದರ್ಶವನ್ನು ಪಾಲಿಸುವಂತೆ ಮಕ್ಕಳಿಗೆ ಕರೆ ನೀಡಿದರು.

ಅಂಬೇಡ್ಕರ್ ಓರ್ವ ವ್ಯಕ್ತಿಯಾಗಿರಲಿಲ್ಲ, ಈ ಸಮಾಜದಲ್ಲಿ ಬದಲಾವಣೆ ಬಯಸಿದ್ದ ಮಹಾನ್ ಶಕ್ತಿಯಾಗಿದ್ದರು ಎಂದ ಅವರು, ಅವರ ಆದರ್ಶದಂತೆ ಮಕ್ಕಳು ಮುನ್ನಡೆಯಬೇಕು, ಅವರ ಶಿಕ್ಷಣ,ಸಮಾನತೆ,ಸ್ವಾತಂತ್ರ್ಯದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಹಿರಿಯ ಶಿಕ್ಷಕ ಎಂ.ಆರ್.ಗೋಪಾಲಕೃಷ್ಣ ಮಾತನಾಡಿ, ಅಂಬೇಡ್ಕರ್ ಅವರು ನೀಡಿರುವ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿಯಾಗಿದೆ, ಅವರ ಹಾದಿಯಲ್ಲಿ ಸಾಗೋಣ, ಸಮಾನತೆಯ ಸಮಾಜ ನಿರ್ಮಿಸೋಣ ಎಂದರು.

ದೇಶಕ್ಕೆ ಅವರು ನೀಡಿದ ಸಂವಿಧಾನ ದೇಶದಲ್ಲಿ ಅಸಮಾನತೆ ಹೋಗಲಾಡಿಸಿ ಸಮಾನತೆಯ ಬದುಕನ್ನು ತರುವುದಾಗಿದೆ ಎಂದು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ರಾಘವೇಂದ್ರ, ಮಾತನಾಡಿ, ನಮ್ಮ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದೆ, ಈ ದೇಶದ ಜನರ ಬದುಕಿಗೆ ಹತ್ತಿರವಾಗಿದೆ ಎಂದು ತಿಳಿಸಿ, ಇಂತಹ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಸಂವಿಧಾನ ನೀಡಿ, ನಮ್ಮ ಹಕ್ಕುಗಳ ಜತೆ ಕರ್ತವ್ಯಗಳನ್ನು ನೆನಪಿಸಿ ಹೋಗಿದ್ದಾರೆ ಎಂದರು.

ಎಸ್‌ಡಿಎಂಸಿ ನಿಕಟಪೂರ್ವ ಅಧ್ಯಕ್ಷ ಮಹೇಂದ್ರ ಮಾತನಾಡಿ, ಜ್ಞಾನ ಸಂಕೇತವಾಗಿರುವ ಅಂಬೇಡ್ಕರ್ ಅವರು ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದರು ಮತ್ತು ಹೆಣ್ಣು ಮಕ್ಕಳ ಹಕ್ಕುಗಳಿಗೆ ಅನೇಕ ರೀತಿಯ ಸಮಾನ ಹಕ್ಕುಗಳನ್ನು ಕಲ್ಪಿಸಿ ಕೊಟ್ಟಿದ್ದಾರೆ ಎಂದರು.

ಶಿಕ್ಷಕರಾದ ಶಿಕ್ಷಕರಾದ ಭವಾನಿ ಹಾಗೂ ವೆಂಕಟರೆಡ್ಡಿ ಸುಗುಣಾ, ಲೀಲಾ, ಶ್ರೀನಿವಾಸಲು,ಎಸ್‌ಡಿಎಂಸಿ ಸದಸ್ಯ ಅರುಣ ಮತ್ತಿತರರಿದ್ದರು.

## 135ನೇ ಅಂಬೇಡ್ಕರ್ ಜಯಂತಿ



ಶ್ರೀನಿವಾಸಪುರ

ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಜಿ ಕೆ ವೆಂಕಟಾಶಿವಾರೆಡ್ಡಿ, ಅಂಬೇಡ್ಕರ್ ಅವರು ಒಂದು ಸಮುದಾಯಕ್ಕೆ ಸೀಮಿತವಾಗದೆ ಎಲ್ಲಾ ವರ್ಗಗಳಿಗೆ ಸಂವಿಧಾನದ ಮೂಲಕ ನ್ಯಾಯ ಒದಗಿಸಿದ ಮಹಾನ್ ವ್ಯಕ್ತಿ ಎಂದು ಹೇಳಿದರು. ಯಾವುದೇ ಸರ್ಕಾರ ಬಂದರೂ ಅಂಬೇಡ್ಕರ್ ಅವರ ಆದರ್ಶಗಳನ್ನು ಪಾಲಿಸಬೇಕು ಎಂದರು. ತಾಲ್ಲೂಕು ಕಚೇರಿ ಆವರಣದಲ್ಲಿ ಇರುವ ಹಳೆಯ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಚೇರಿ ನಿರ್ಮಿಸುವ ಯೋಜನೆ ಇದೆ ಎಂದು ತಿಳಿಸಿದ ಅವರು, ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಈಗಾಗಲೇ 2 ಕೋಟಿ ಲಭ್ಯವಿದ್ದು, ಇನ್ನಷ್ಟು 2 ಕೋಟಿಗೆ ಬೇಡಿಕೆ ಇಡಲಾಗಿದೆ. ಮುಂದಿನ ಒಂದು ವರ್ಷದಲ್ಲಿ ಭವನ ಉದ್ಘಾಟನೆ ಮಾಡುವ ಗುರಿ ಹೊಂದಿದ್ದೇವೆ ಎಂದು ಭರವಸೆ ನೀಡಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಡಾ ಕೆ ಎನ್ ವೇಣುಗೋಪಾಲ್ ಮಾತನಾಡಿ, ಇಂದು ನಾವು ನೆಮ್ಮದಿ ಜೀವನ ನಡೆಸುತ್ತಿರುವುದಕ್ಕೆ ಅಂಬೇಡ್ಕರ್ ರಚಿಸಿದ ಸಂವಿಧಾನವೇ ಕಾರಣ ಎಂದು ಹೇಳಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ತಾಲೂಕಿನ ಗ್ರಾಮ ಪಂಚಾಯಿತಿಗಳಿಂದ ಬಂದ ಸ್ತಬ್ಧಚಿತ್ರಗಳೊಂದಿಗೆ ಜಾನಪದ ತಂಡಗಳ ಅದ್ದೂರಿ ಮೆರವಣಿಗೆ ನಡೆಯಿತು.

